ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಅಕ್ಟೋಬರ್ 15, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 153 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಸಾರವರ್ಧಿತ ಅಕ್ಕಿ ಎಚ್ಚರಿಕೆ ಕೇಂದ್ರಕ್ಕೆ ಸುಪ್ರೀಂ ನೋಟಿಸ್

ನವದೆಹಲಿ, ಅ. 14 – ಕುಡಗೋಲು ಕಣ ರಕ್ತಹೀನತೆ ಹಾಗೂ ಕುಸುಮರೋಗದಿಂದ ಬಳಲುತ್ತಿರುವವರಿಗೆ ಸಾರವರ್ಧಿತ ಅಕ್ಕಿಯು ಅಪಾಯಕಾರಿ ಎಂಬ ಸೂಚನೆ ನೀಡುವ ಕುರಿತು ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಮ ಪಾಲಿಸಿರುವ ಬಗ್ಗೆ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.

ನಾಲ್ಕು ವಾರಗಳಲ್ಲಿ ಈ ಬಗ್ಗೆ ಉತ್ತರ ನೀಡಬೇಕು ಹಾಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ತಿಳಿಸಬೇಕು ಎಂದು ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠ ಹೇಳಿದೆ. ಕುಡಗೋಲು ಕಣ ರಕ್ತಹೀನತೆ ಹಾಗೂ ಕುಸುಮರೋಗದಿಂದ ಬಳಲುತ್ತಿರುವವರು ಸಾರವರ್ಧಿತ ಅಕ್ಕಿ ಸೇವಿಸಬಾರದು. ಈ ಬಗ್ಗೆ ಸಾರವರ್ಧಿತ ಅಕ್ಕಿಯ ಮೇಲೆ ಎಚ್ಚರಿಕೆ ಇರಬೇಕು ಎಂಬ ನಿಯಮ ವಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ರಾಜೇಶ್ ಕೃಷ್ಣನ್ ಹಾಗೂ ಇತರರು ಅರ್ಜಿ ದಾಖಲಿಸಿದ್ದಾರೆ.

ಸಾರವರ್ಧಿತ ಅಕ್ಕಿಯಲ್ಲಿ ಕಬ್ಬಿಣ, ಅಯೋಡಿನ್, ಜಿಂಕ್, ವಿಟಮಿನ್ ಎ ಹಾಗೂ ವಿಟಮಿನ್ ಡಿ ಅಂಶಗಳನ್ನು ಬೆರೆಸಲಾಗುತ್ತದೆ.




## ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

**2023-24, 2024-25 ಮತ್ತು 2025-26ನೇ ಸಾಲಿನ 3 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಚುನಾವಣೆ**

ಗೌರವಾನ್ವಿತ ಹಿರಿಯ ಸದಸ್ಯರ ಬೆಂಬಲಿತ ಹಾಗೂ ಹಿರಿಯ ಸದಸ್ಯರು ಆಡಳಿತ ನಡೆಸಿ ಅನುಭವವಿರುವ ಶ್ರೀ ಆನಗೋಡು ನಂಜುಂಡಪ್ಪನವರ ನೇತೃತ್ವದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳಾದ ನಮಗೆ ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ನೀಡಿ ಜಯಶೀಲರನ್ನಾಗಿ ಮಾಡಿ, ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿಸುತ್ತೇವೆ.

| ಕ್ರ.ಸಂ. | ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 2 | ನಂಜುಂಡಪ್ಪ ಹೆಚ್. | ಅಧ್ಯಕ್ಷ | | | |
| 2 | ನಾಗರಾಜ್ ಕೆ.ಬಿ. | ಉಪಾಧ್ಯಕ್ಷ | | | |
| 2 | ರಾಜಶೇಖರ್ ಎಂ.ಕೆ. (ಕೈದಾಳ್ ರಾಜು) | ಗೌರವ ಕಾರ್ಯದರ್ಶಿ | | | |
| 2 | ಲಿಂಗರಾಜ್ ವಾಲಿ ಹೆಚ್.ಸಿ. | ಗೌರವ ಸಹ ಕಾರ್ಯದರ್ಶಿ | | | |
| 1 | ಇಂದುಧರ್ ಎನ್.ಎಂ. (ನಿಶಾನಿಮಠ್) | ಕೋಶಾಧ್ಯಕ್ಷ | | | |
| | 6 ನಿರ್ದೇಶಕರ ಸ್ಥಾನಗಳು | | | | |
| 2 | ನಾಗರಾಜ್ ಜಿ. (ಪಿ & ಟಿ) | ನಿರ್ದೇಶಕ | | | |
| 3 | ನಾಗರಾಜ್ ಬಿ.ಜಿ. (ಬಸಾಪಟ್ಟಣ) | ನಿರ್ದೇಶಕ | | | |
| 4 | ಪುಟ್ಟಪ್ಪ ಕಾಶಿಪುರ್ | ನಿರ್ದೇಶಕ | | | |
| 6 | ಬಾದಾಮಿ ಮಲ್ಲಿಕಾರ್ಜುನ | ನಿರ್ದೇಶಕ | | | |
| 10 | ಶ್ರೀಪಂಚಿ ಟಿ.ಕೆ. | ನಿರ್ದೇಶಕ | | | |
| 12 | ಸುಪುತ್ರ ಕುಮಾರ್ ಬಿ.ಟಿ. | ನಿರ್ದೇಶಕ | | | |

**ನಮ್ಮ ಧ್ಯೇಯೋದ್ದೇಶಗಳು :**
ಕ್ಲಬ್‌ನಲ್ಲಿ ದುಂದುವೆಚ್ಚವಿಲ್ಲದೇ ಅಭಿವೃದ್ಧಿ, ಗೌರವಾನ್ವಿತ ಸದಸ್ಯರಿಗೆ ಅನುಕೂಲವಾಗುವ ಅಭಿವೃದ್ಧಿ ಕಾರ್ಯಕ್ರಮ, ಸದಸ್ಯರಿಗೆ ನಿರ್ವಹಣಾ ಶುಲ್ಕ ರದ್ದು ಮಾಡುವುದು. ಗ್ರೂಪ್ ಇನ್ಶೂರೆನ್ಸ್ ಮಾಡುವ ಪ್ರಯತ್ನ, ಕ್ಲಬ್‌ಗೆ ಪೂರ್ತಿಯಾಗಿ ಸೋಲಾರ್ ರೂಫ್‌ಟಾಪ್ ಅಳವಡಿಸುವುದು. ಹೆಚ್ಚುವರಿ ಅತಿಥಿಗೃಹ ಕೊಠಡಿಗಳ ನಿರ್ಮಾಣ. ಕಾರ್‌ಪಾರ್ಕಿಂಗ್ ನವೀಕರಣ ಹಾಗೂ ಹಲವಾರು ಅಭಿವೃದ್ಧಿ ಕಾರ್ಯಕ್ರಮ ಮಾಡುವುದು ನಮ್ಮ ಉದ್ದೇಶ.

**ಮತದಾನ ದಿನಾಂಕ :**
15–10–2023ನೇ ಭಾನುವಾರ
ಬೆಳಿಗ್ಗೆ 9–00 ರಿಂದ
ಮಧ್ಯಾಹ್ನ 3–00 ರವರೆಗೆ

**ಮತದಾನ ನಡೆಯುವ ಸ್ಥಳ :**
ದಿ ದಾವಣಗೆರೆ ಕ್ಲಬ್ (ರಿ.)
ದಾವಣಗೆರೆ

ವಿ.ಸೂ. : ಒಬ್ಬ ಸದಸ್ಯರು ಅಧ್ಯಕ್ಷ, ಉಪಾಧ್ಯಕ್ಷ, ಗೌ॥ ಕಾರ್ಯದರ್ಶಿ, ಗೌ॥ ಸಹಕಾರ್ಯದರ್ಶಿ, ಗೌ॥ ಕೋಶಾಧ್ಯಕ್ಷ ಸ್ಥಾನಗಳಿಗೆ ಒಂದೊಂದು ಮತ್ತು 6 ನಿರ್ದೇಶಕರ ಸ್ಥಾನಗಳಿಗೆ ತಲಾ ಒಂದರಂತೆ ಒಟ್ಟು 11 ಮತಗಳನ್ನು ಮಾತ್ರ ಚಲಾಯಿಸತಕ್ಕದ್ದು.

## ದಿ ದಾವಣಗೆರೆ ಕ್ಲಬ್ (ರಿ.)

ನಮ್ಮ ನಡೆ ಅಭಿವೃದ್ಧಿಯ ಕಡೆ | ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ - 577 002. | ನಮ್ಮ ನಡೆ ಅಭಿವೃದ್ಧಿಯ ಕಡೆ

**2023-2024, 2024-25, 2025-26ನೇ ಸಾಲಿನ 3 ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ ಚುನಾವಣೆ**

| ಕ್ರ.ಸಂ. | ಉಮೇದುದಾರರ ಹೆಸರು | ಸ್ಥಾನಗಳು | ಗುರುತು | ಭಾವಚಿತ್ರ | ಗುರುತು |
|---|---|---|---|---|---|
| 1 | ಚಂದ್ರಶೇಖರ್ ಎ.ಬಿ. (ABC) | ಅಧ್ಯಕ್ಷ ಸ್ಥಾನಕ್ಕೆ | | | |
| 1 | ಉಳವಯ್ಯ ಎಸ್.ಜಿ. | ಉಪಾಧ್ಯಕ್ಷ ಸ್ಥಾನಕ್ಕೆ | | | |
| 3 | ರವಿಶಂಕರ್ ಪಲ್ಲಾಗಟ್ಟಿ | ಗೌರವ ಕಾರ್ಯದರ್ಶಿ ಸ್ಥಾನಕ್ಕೆ | | | |
| 1 | ಐನಳ್ಳಿ ಜೈದೀಪ್ (ದೀಪು) | ಗೌರವ ಸಹ ಕಾರ್ಯದರ್ಶಿ ಸ್ಥಾನಕ್ಕೆ | | | |
| 2 | ಪ್ರಶಾಂತ ಗುಪ್ತ ಎಸ್.ಕೆ. | ಖಜಾಂಚಿ ಸ್ಥಾನಕ್ಕೆ | | | |
| | ಆರು ನಿರ್ದೇಶಕರ ಸ್ಥಾನಕ್ಕೆ | | | | |
| 1 | ಅಭಿಷೇಕ್ ಬಿ.ಜೆ. (ಬೇತೂರು) | ನಿರ್ದೇಶಕರ ಸ್ಥಾನಕ್ಕೆ | | | |
| 5 | ಬಸವರಾಜಯ್ಯ ಹೆಚ್.ಎಂ. (ಅಕ್ಕಿ ರಾಜು) | ನಿರ್ದೇಶಕರ ಸ್ಥಾನಕ್ಕೆ | | | |
| 7 | ಬೆಳ್ಳೂಡಿ ಸದಾನಂದ | ನಿರ್ದೇಶಕರ ಸ್ಥಾನಕ್ಕೆ | | | |
| 8 | ರುದ್ರೇಶ್ ಹೆಚ್.ವಿ. | ನಿರ್ದೇಶಕರ ಸ್ಥಾನಕ್ಕೆ | | | |
| 9 | ವಿಶ್ವನಾಥ್ ಬಿ. ಪಾಟೀಲ್ | ನಿರ್ದೇಶಕರ ಸ್ಥಾನಕ್ಕೆ | | | |
| 11 | ಸನ್ನಿ ಎ.ಎ. ಅಂತೋಣಿ ಅಬ್ರಾಂ | ನಿರ್ದೇಶಕರ ಸ್ಥಾನಕ್ಕೆ | | | |

### ಕ್ಲಬ್‌ನ ಸದಸ್ಯರಲ್ಲಿ ಮನವಿ

2023-24, 2024-25 ಮತ್ತು 2025-2026ನೇ ಸಾಲುಗಳವರೆಗೆ (3 ವರ್ಷ) ಅವಧಿಗೆ ದಿನಾಂಕ 15.10.2023ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ ನಾವುಗಳು ಒಮ್ಮತದಿಂದ ಎ.ಬಿ.ಚಂದ್ರಶೇಖರ್‌ರವರ ನೇತೃತ್ವದಲ್ಲಿ ಸ್ಪರ್ಧಿಸಲು ತೀರ್ಮಾನಿಸಿದ್ದು, ಈ ಪೈಕಿ ಅಧ್ಯಕ್ಷರು 1 ಸ್ಥಾನ, ಉಪಾಧ್ಯಕ್ಷರು 1 ಸ್ಥಾನ, ಗೌರವ ಕಾರ್ಯದರ್ಶಿ 1 ಸ್ಥಾನ, ಗೌರವ ಸಹ ಕಾರ್ಯದರ್ಶಿ 1 ಸ್ಥಾನ, ಖಜಾಂಚಿ 1 ಸ್ಥಾನ ಹಾಗೂ 6 ಜನ ನಿರ್ದೇಶಕರುಗಳು ಅಂದರೆ ನಮ್ಮ ಗುಂಪಿನಲ್ಲಿರುವ ಒಟ್ಟು 11 ಜನ ಅಭ್ಯರ್ಥಿಗಳಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಬೇಕೆಂದು ಕೋರುತ್ತೇವೆ. ಈ ಹಿಂದಿನ ಮೂರು ವರ್ಷಗಳಲ್ಲಿ ಕ್ಲಬ್‌ನ ಸರ್ವತೋಮುಖ ಅಭಿವೃದ್ಧಿ ಮಾಡಿದ್ದು ಮತ್ತು ಅದೇ ರೀತಿ ಮುಂದಿನ 3 ವರ್ಷಗಳ ಅವಧಿಯಲ್ಲಿ ಕ್ಲಬ್‌ನ ಹೆಚ್ಚಿನ ಅಭಿವೃದ್ಧಿಗೆ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಎ.ಬಿ. ಚಂದ್ರಶೇಖರ್ ಗುಂಪಿನವರ ಹಿಂದಿನ 3 ವರ್ಷಗಳ ಸಾಧನೆ ಹಾಗೂ ಮುಂದಿನ 3 ವರ್ಷಗಳ ಯೋಜನೆ

**ನಮ್ಮ ಆಡಳಿತ ಮಂಡಳಿಯು ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿಯ ಕಾರ್ಯಕ್ರಮಗಳ ಒಂದು ಪಕ್ಷಿ ನೋಟ**

ಸರ್ವ ಸದಸ್ಯರುಗಳೇ/ಮತದಾರ ಬಾಂಧವರೇ, ನಮ್ಮ ಕ್ಲಬ್‌ನಲ್ಲಿ ಕಳೆದ 3 ವರ್ಷಗಳಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

- 75 ವರ್ಷ ಮೇಲ್ಪಟ್ಟ ಕ್ಲಬ್‌ನ ಎಲ್ಲಾ ಹಿರಿಯ ಸದಸ್ಯರುಗಳಿಗೆ ಸನ್ಮಾನ ಮಾಡಿದ್ದೇವೆ.
- ಟೆನ್ನಿಸ್ ಕೋರ್ಟ್‌ನಲ್ಲಿ ಹೊನಲು ಬೆಳಕಿನ ದೀಪಗಳನ್ನು ಅಳವಡಿಸಲಾಗಿದೆ. ಕ್ಲಬ್‌ನ ಒಳಗಡೆ ಎಲ್ಲಾ ವಿಭಾಗಗಳಲ್ಲಿಯೂ ಎಲ್.ಇ.ಡಿ. ಲೈಟ್‌ಗಳನ್ನು ಹಾಕಲಾಗಿರುತ್ತದೆ. ಲಾನ್ ಹಾಗೂ ಗಾರ್ಡನನ್ನು ಕಾಲ ಕಾಲಕ್ಕೆ ಉತ್ತಮವಾಗಿ ನಿರ್ವಹಣೆ ಮಾಡುತ್ತಾ ಬಂದಿದ್ದು, ಇಂದು ಒಂದು ಸುಂದರವಾದ ಗಾರ್ಡನ್ ಆಗಿ ಹೊರ ಹೊಮ್ಮಿರುತ್ತದೆ. ಲಾನ್‌ನಲ್ಲಿ ಹೊಸ ಅಲಂಕಾರಿಕ ದೀಪಗಳನ್ನು ಹಾಗೂ ಸುಂದರ ಜೋಕಾಲಿಯನ್ನೂ ಸಹ ಅಳವಡಿಸಲಾಗಿದೆ ಮತ್ತು ಗಾರ್ಡನ್ ಏರಿಯಾದಲ್ಲಿ ಸುಂದರವಾದ ಅಲಂಕಾರಿಕ ಕಂಬಗಳನ್ನು ಅಳವಡಿಸಲಾಗಿದೆ.
- ಈಗಿರುವ ಜಿಮ್‌ಅನ್ನು ವಿಸ್ತರಿಸಿ, ಹೊಸದಾಗಿ ಬಿಲಿಯರ್ಡ್ಸ್ ಟೇಬಲ್ ತಂದು ಬಿಲಿಯರ್ಡ್ಸ್ ಗಾಗಿಯೇ ಪ್ರತ್ಯೇಕ ಸುಸಜ್ಜಿತ ಕೊಠಡಿಯ ವ್ಯವಸ್ಥೆ ಮಾಡಲಾಗಿದೆ.
- ಕಾರ್ಡ್ ರೂಂನ ಪಕ್ಕದಲ್ಲಿ ಇರುವ ಶೌಚಾಲಯವನ್ನು ನವೀಕರಣ ಮಾಡಲಾಗಿದೆ.
- ಕ್ಲಬ್‌ನ ನೌಕರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅವರ ವೇತನವನ್ನು ಹೆಚ್ಚಿಸಲಾಗಿದೆ. ವಿಶೇಷ ದಿನಾಚರಣೆಗಳು, ಹಬ್ಬ ಹರಿದಿನಗಳ ಶುಭಾಶಯಗಳನ್ನು, ಕ್ಲಬ್‌ನ ಚಟುವಟಿಕೆಗಳ ಮಾಹಿತಿಗಳನ್ನು ವಾಟ್ಸಾಪ್ ಮೂಲಕ ಸರ್ವ ಸದಸ್ಯರುಗಳಿಗೆ ಕಳುಹಿಸಲಾಗುತ್ತದೆ. ಎಲ್ಲಾ ರಾಷ್ಟ್ರೀಯ ಹಬ್ಬಗಳನ್ನೂ ಸಹ ಕ್ಲಬ್‌ನಲ್ಲಿ ಆಚರಿಸಲಾಗಿರುತ್ತದೆ.
- ಕ್ಲಬ್‌ನಲ್ಲಿ ಮುಖ್ಯವಾಗಿ ಹಳೆಯ ದ್ವಿಚಕ್ರ ವಾಹನ ನಿಲ್ದಾಣವನ್ನು ತೆರವುಗೊಳಿಸಿ, ಒಂದು ಹೊಸ ಸುಸಜ್ಜಿತ ಸುಂದರವಾದ ವಾಹನ ನಿಲ್ದಾಣವನ್ನು ನಿರ್ಮಾಣ ಮಾಡಲಾಗಿದೆ.
- ಹೊಸದಾಗಿ ಹೈಟೆಕ್ ಡೈನಿಂಗ್ ಹಾಲ್ ನಿರ್ಮಾಣ ಕಾಮಗಾರಿಯನ್ನು, ಸುಸಜ್ಜಿತ ಪೀಠೋಪಕರಣಗಳನ್ನು ಅಳವಡಿಸಿ ಪೂರ್ಣಗೊಳಿಸಲಾಗಿದೆ. ಕ್ಲಬ್‌ಗೆ ಬಣ್ಣದ ಕಾಮಗಾರಿಯನ್ನೂ ಸಹ ಕೈಗೊಳ್ಳಲಾಗಿರುತ್ತದೆ.
- ಕ್ಲಬ್‌ನ ಪ್ಯಾಸೇಜ್ ಸುತ್ತಲೂ ಕಾಂಕ್ರೀಟ್ ಕಾಮಗಾರಿಯನ್ನೂ ಸಹ ಕೈಗೊಳ್ಳಲಾಗಿರುತ್ತದೆ. ಟೆನ್ನಿಸ್ ಕೋರ್ಟ್‌ನಲ್ಲಿ ಗೇಟ್ ಅಳವಡಿಸುವ ಕಾಮಗಾರಿ, ಎ.ಸಿ. ಬಾರ್‌ನಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
- ಕ್ಲಬ್‌ನ ನೀರಿನ ಟ್ಯಾಂಕ್ ಮೇಲೆ ಒಂದು ಸುಂದರವಾದ ಹೊಸ ಉಲ್ಲಾಸ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಹೊಸದಾಗಿ ಅತಿಥಿ ಕೌಂಟರನ್ನು ಅಳವಡಿಸಲಾಗಿದೆ.
- ಸುಂದರವಾದ ಫಿಶ್ ಪಾಂಡ್ ಸಹ ಅಳವಡಿಸಿದೆ ಮತ್ತು ಅವಶ್ಯಕವಾದ ಸಣ್ಣ-ಪುಟ್ಟ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

**ಮುಂದಿನ 3 ವರ್ಷಗಳ ಅವಧಿಯಲ್ಲಿ ನಿರ್ವಹಣೆ ಮಾಡಲು ನಾವು ಉದ್ದೇಶಿಸಿರುವ ಕಾರ್ಯಕ್ರಮಗಳ ಪಟ್ಟಿ ಈ ಕೆಳಗೆ ವಿವರಿಸಿದೆ**

- ಸ್ಪೌಸ್ ಮೆಂಬರ್‌ಗಳಿಗೆ ಪ್ರತ್ಯೇಕ ಕೊಠಡಿಗಳ ನಿರ್ಮಾಣ ಹಾಗೂ ಫ್ಯಾಮಿಲಿ ಕ್ಲಬ್ ಆಗಿ ಪರಿವರ್ತನೆ ಮಾಡಲು ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುತ್ತೇವೆ.
- ಹೆಚ್ಚುವರಿಯಾಗಿ ಆರು ಹೊಸ ಅತಿಥಿ ಕೊಠಡಿಗಳ ನಿರ್ಮಾಣ
- ಕಾರ್ ಪಾರ್ಕಿಂಗ್ ಸ್ಥಳದ ನವೀಕರಣ.
- ಸೋಲಾರ್ ರೂಫ್ ಟಾಪ್‌ಗಳ ಅಳವಡಿಕೆ
- ಬಾರ್‌ನಲ್ಲಿ ಗಣಕೀಕೃತ ಬಿಲ್ಲಿಂಗ್ ಸಿಸ್ಟಂನ ಪ್ರಾರಂಭೋತ್ಸವ
- ಆಡಳಿತ ಕಛೇರಿಯ ಸಂಪೂರ್ಣ ಗಣಕೀಕೃತ ಹಾಗೂ ಸರ್ವ ಸದಸ್ಯರಿಗೆ ಅನುಕೂಲವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ ಎಂದು ಈ ಮೂಲಕ ತಮಗೆ ತಿಳಿಯ ಬಯಸುತ್ತೇವೆ.

**ಮತದಾನದ ದಿನಾಂಕ : 15-10-2023ನೇ ಭಾನುವಾರ - ಮತದಾನ ಸಮಯ : ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ**
**ಚುನಾವಣೆ ನಡೆಯುವ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.**

## ನವ ಬಣ್ಣ ನವ ದೇವಿಯರ ವೈಶಿಷ್ಟ್ಯತೆ

ಶೈಲಪುತ್ರಿ ನಮೋಸ್ತುತೆ
ಪಾಲಿಸೆಮ್ಮನು ಶ್ರೀ ಮಾತೇ
ಸಕಲ ದುರಿತನಿವಾರಿಣೀ ತಾಯೇ
ಮೆಲ್ಲಾಡಿ ಇಡುತ ಬಾ ಕಿತ್ತಳೆ ಬಣ್ಣ ಪ್ರಿಯೇ

ಶ್ವೇತ ವಸ್ತ್ರ ಧಾರಿಣಿ ದೇವಿ
ಶಾಂತಿ ನೆಮ್ಮದಿಯ ನೀಡಮ್ಮ ದೇವಿ
ಬ್ರಹ್ಮಚಾರಿಣಿ ನೀ ಕರುಣೆಯಿಂದ ನೋಡಮ್ಮದೇವಿ
ಬಹು ಭಕ್ತಿಯಲ್ಲಿ ಬೇಡುವೆನು ದೇವಿ

ದುಷ್ಟ ಮರ್ದಿನಿ ಚಂದ್ರ ಘಂಟಾ
ಶಿಷ್ಟ ಜನರ ಉದ್ಧರಿಸು ಮಾತಾ
ಕಷ್ಟ ಕಳೆವವಳೆ ಕೆಂಪು ರಂಗು ಪ್ರಿಯೇ
ಇಷ್ಟಾರ್ಥ ನೀಡಿ ಕಾಪಾಡು ತಾಯೇ

ಅಭಿಷ್ಟ ದಾಯಕಿ ಕುಷ್ಮಂಡಾ
ಅಭಯ ನೀಡಲು ಬಾರೇ
ಗಾಢ ನಿಲಿಯಲಿ ಹೊಳೆ ಹೊಳೆ ವವಳೆ
ಮೂಢ ಜನರಿಗೆ ಮತಿ ನಿಡೆ ಮಂಗಳೆ

ಕಾರ್ತಿಕೇಯನ ಮಾತೇ ಸ್ಕಂದಮಾತಾ
ಆರ್ತರ ಸಲಹು ಬಾಮ್ಮಾ
ಭಕ್ತರ ಮೊರೆ ಆಲಿಸಮ್ಮ
ಅತಿ ಪ್ರೀತಿಯಲಿ ಹಳದಿ ವಸ್ತ್ರ ತೊಡಿಸುವೆನಮ್ಮ

ಕಾಳರಾತ್ರ ದೇವಿ ಉಗ್ರ ರೂಪ ತ್ಯಜಿಸಮ್ಮ
ಕಾಳಿಯಾಗಿ ನೀ ಅಸುರರ ಮರ್ದಿಸಮ್ಮ
ಕಳಕಳಿ ಇಂದಲಿ ಬೇಡುವೆನಮ್ಮ
ಕಳವಳ ಕಳೆಯೇ ಬೂದು ಬಣ್ಣ ಪ್ರಿಯೇ

ಹಸಿರಸೀರೆಯುಟ್ಟು ಬಾ ಲಲಿತೆ
ಬಿಸಿಯಾದ ನೈವೇದ್ಯ ನೀಡುವೆ ಮಾತೇ
ಉಸಿರುಸಿರಿನಲ್ಲು ನೀನೇ ತುಂಬಿಹೆ
ಹಸಿದಿಹ ಮಕ್ಕಳ ಸಲಹು ಕಾತ್ಯಾಯಿನಿ

ಪರಿ ಪರಿಯಾಲಿ ನಿನ್ನಾ ಬೇಡುವೆ ಮಹಾಗೌರಿ
ಪರಿಹರಿಸು ಸಂಕಷ್ಟಗಳ ಶಿವೆಯೇ
ಕರಿ ಬಣ್ಣ ಶಿವನಿಂದ ಸ್ವಚ್ಛ ಗೊಳಿಸಿಕೊಂಡೆ
ಮರೆಯದೆ ಕರುಣಿಸು ಗುಲಾಬಿ ಬಣ್ಣ ಪ್ರಿಯೇ

ಆಕಾಶ ನೀಲಿ ವಸ್ತ್ರ ಧರಿಸಿದವಳೆ
ಜೋಕೆಯಲಿ ಬಂದು ನೀ ಕಾಯೇ
ಅಂಕೆಯಿಲ್ಲದ ಸುಖ ನೀಡುವ ಸಿದ್ಧಿದಾತ್ರಿಯೆ
ಶಂಕಿಸದೆ ವರಗಳ ನೀಡು
ಮುದ್ದುಬಾಲ ಕೃಷ್ಣ ಸೋದರಿಯೆ

**- ಕೋಮಲ ವಿ ಕುಮಾರ್**

# ಜನಪದ ಕಲೆ ನಮ್ಮ ದೇಶದ ಹೆಮ್ಮೆ

## ಬೆಳ್ಳೂಡಿ ಜನಪದ ಉತ್ಸವದಲ್ಲಿ ಶಾಸಕ ಬಿ.ಪಿ.ಹರೀಶ್ ಸಂತಸ




ಮಲೇಬೆನ್ನೂರು, ಅ. 14- ನಮ್ಮ ದೇಶದ ಸಂಸ್ಕೃತಿ, ಪರಂಪರೆಯನ್ನು ತೋರಿಸುವ ಜಾನಪದ ಕಲೆಯನ್ನು ಉಳಿಸಿ, ಬೆಳೆಸುವ ಮೂಲಕ ಮುಂದಿನ ಪೀಳಿಗೆಗೂ ಪರಿಚಯಿಸಬೇಕೆಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಬೆಳ್ಳೂಡಿ ಗ್ರಾಮದಲ್ಲಿ ದಕ್ಷಿಣ ಮಧ್ಯಕ್ಷೇತ್ರ ಸಾಂಸ್ಕೃತಿಕ ಕೇಂದ್ರ (ನಾಗಪುರ) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ದಾವಣಗೆರೆ), ಬೆಳ್ಳೂಡಿ ಗ್ರಾ.ಪಂ. ಹಾಗೂ ಜೈ ಹನುಮಾನ್ ಸಾಂಸ್ಕೃತಿಕ ಯುವಕ ಸಂಘ (ಬೆಳ್ಳೂಡಿ) ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ರಾಷ್ಟ್ರೀಯ ಜಾನಪದ ಉತ್ಸವವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಹೊಂದಿರುವ ಜಾನಪದ ಕಲೆಯಿಂದಾಗಿ ಭಾರತ ಜಗತ್ತಿನ ಗಮನ ಸೆಳೆದಿದೆ. ಅಂತಹ ಜಾನಪದ ಕಲೆಯನ್ನು ಹಳ್ಳಿಗಳಿಂದಲೇ ಗಟ್ಟಿಗೊಳಿಸುವ ಕೆಲಸ ಮಾಡಬೇಕು. ಟಿವಿ, ಮೊಬೈಲ್‌ನಲ್ಲಿ ಮುಳುಗಿರುವ ನಾವೆಲ್ಲರೂ ಅದರಿಂದ ಹೊರ-ಬಂದು ಇಂತಹ ಉತ್ಸವಗಳನ್ನು ನೋಡುವ ಮೂಲಕ ಹೊರ ರಾಜ್ಯಗಳ ಕಲೆ, ಸಾಹಿತ್ಯ, ಸಂಸ್ಕೃತಿಯ ಪರಿಚಯ ಮಾಡಿಕೊಳ್ಳಬೇಕು. ಅದಕ್ಕಾಗಿ ಈ ದಿನ ಬೆಳ್ಳೂಡಿಯಲ್ಲಿ ನಡೆದ ಈ ಉತ್ಸವವನ್ನು ಭಾನುವಾರ ಸಂಜೆ ಹನಗವಾಡಿಯಲ್ಲೂ ಹಮ್ಮಿಕೊಂಡಿದ್ದಾರೆ. ಮುಂದಿನ ವರ್ಷ ಹರಿಹರ ಕ್ಷೇತ್ರದ ಗಡಿಭಾಗಗಳಲ್ಲಿ ಈ ಉತ್ಸವ ಮಾಡೋಣ ಎಂದು ಹರೀಶ್ ಹೇಳಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಗ್ರಾಮೀಣ ಸಂಸ್ಕೃತಿ ಇನ್ನೂ ಉಳಿದ್ದರೆ ಅದು ಜಾನಪದ ಕಲೆಯಿಂದಾಗಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಬೆಳ್ಳೂಡಿಯ ಡೊಳ್ಳಿನ ಕಲಾವಿದರು ಹೊರ ರಾಜ್ಯಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸುವ ಮೂಲಕ ಕರ್ನಾಟಕಕ್ಕೆ ಕೀರ್ತಿ ತರುವ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉತ್ಸವದ ಅಧ್ಯಕ್ಷತೆ ವಹಿಸಿದ್ದ ಬೆಳ್ಳೂಡಿ ಗ್ರಾ.ಪ. ಅಧ್ಯಕ್ಷ ಬಿ. ಉಮೇಶ್, ದಕ್ಷಿಣ ಸಾಂಸ್ಕೃತಿಕ ಕೇಂದ್ರದ ಅಧಿಕಾರಿ ಗೋಪಾಲ್, ಗ್ರಾ.ಪಂ. ಮಾಜಿ ಸದಸ್ಯ ಎಂ. ಆರ್. ಮರುಳಸಿದ್ಧಯ್ಯ ಮಾತನಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ. ನರೇಂದ್ರ, ಪ್ರೌಢಶಾಲೆ ಅಧ್ಯಕ್ಷ ಜಿ. ಹನುಮಂತಗೌಡ್ರು, ಗ್ರಾ. ಪಂ.ಉಪಾಧ್ಯಕ್ಷೆ ಶ್ರೀಮತಿ ನೇತ್ರಾವತಿ, ಸದಸ್ಯರಾದ ಶ್ರೀಮತಿ ಗೀತಮ್ಮ ವೀರೇಶ್, ಶಿವಪ್ಪ, ಸಿದ್ದೇಶಪ್ಪ, ಮಂಜಮ್ಮ ಪಿಡಿಓ ಶಿವಪ್ಪ ಬಿರಾದಾರ್, ರಾಜನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ನಾಗೇನಹಳ್ಳಿ ಮಹಾಂತೇಶ್, ಗ್ರಾಮದ ರೇವಣಸಿದ್ಧಪ್ಪ, ಕೆಂಚಪ್ಪ, ಸುದೀಪ್ ಗೌಡ್ರು, ಸಂತೋಷ್, ಭಾನುವಳ್ಳಿ ಮಹೇಂದ್ರ, ಕಾರ್ಯಕ್ರಮದ ಮೇಲ್ವಿಚಾರಕರಾದ ಮಾಗಾನಹಳ್ಳಿ ಮಂಜುನಾಥ್, ಪುರಂದರ್ ಲೋಕಿಕೆರೆ, ಜೈ ಹನುಮಾನ್ ಸಾಂಸ್ಕೃತಿಕ ಸಂಘದ ಗೌರವಾಧ್ಯಕ್ಷ ಬಿ.ಎಂ. ರೇವಣಸಿದ್ಧಪ್ಪ, ಅಧ್ಯಕ್ಷ ಎ.ಎಂ.ಹನುಮಂತ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಗ್ರಾ.ಪಂ ಮಾಜಿ ಸದಸ್ಯ ಕೃಷ್ಣಮೂರ್ತಿ ಸ್ವಾಗತಿಸಿದರು. ಉಪನ್ಯಾಸಕರಾದ ಶ್ರೀಮತಿ ಸುಮತಿ ಜಯಪ್ಪ ಕಾರ್ಯಕ್ರಮ ನಿರೂಪಿಸಿದರು.

## ಪಲ್ಲಾಗಟ್ಟೆಯಲ್ಲಿ ಇಂದು 'ಗುರು ವಂದನೆ- ಸ್ನೇಹ ಸಮ್ಮಿಲನ' ಕಾರ್ಯಕ್ರಮ

ದಾವಣಗೆರೆ, ಅ.14- ಜಗಳೂರು ತಾಲ್ಲೂಕು ಪಲ್ಲಾಗಟ್ಟೆ ಗ್ರಾಮದಲ್ಲಿ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀಮತಿ ಸಿದ್ದಮ್ಮ ಗ್ರಾಮೀಣ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ 1994-95 ನೇ ಸಾಲಿನ ವಿದ್ಯಾರ್ಥಿಗಳಿಂದ 'ಗುರು ವಂದನೆ ಹಾಗೂ ಸ್ನೇಹ ಸಮ್ಮಿಲನ' ಕಾರ್ಯಕ್ರಮವನ್ನು ನಾಳೆ ದಿನಾಂಕ 15 ರಂದು ಬೆಳಿಗ್ಗೆ 10 ಗಂಟೆಗೆ ಪಲ್ಲಾಗಟ್ಟೆ ಶಾಲಾವರಣದಲ್ಲಿ ಹಮ್ಮಿಕೊಂಡಿರುವುದಾಗಿ ಶಾಲೆಯ ಹಳೆಯ ವಿದ್ಯಾರ್ಥಿ ಮಹಾದೇವಪ್ಪ ದಿದ್ದಿಗಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಶಾಲೆಯ ಮುಖ್ಯ ಶಿಕ್ಷಕ ಮಾರುತೇಶ ರೆಡ್ಡಿ ಅಧ್ಯಕ್ಷತೆ ವಹಿಸುವರು. 64 ಹಿರಿಯ ವಿದ್ಯಾರ್ಥಿಗಳು ಸೇರಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ಇದೇ ಸಂದರ್ಭದಲ್ಲಿ 18 ಶಿಕ್ಷಕರನ್ನು ಗೌರವಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆರ್.ಹೆಚ್. ಮಹೇಶ್ವರಪ್ಪ, ಕೆ.ಹಾಲೇಶ್ ಪಲ್ಲಾಗಟ್ಟೆ, ಪಿ. ಗೌರಮ್ಮ , ಗೋಣಿ ಬಸವರಾಜ್, ತಿಮ್ಮಪ್ಪ, ಕರಿಯಪ್ಪ ಉಪಸ್ಥಿತರಿದ್ದರು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಉತ್ಸವ




ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 24 ರವರಗೆ ನವರಾತ್ರಿ ಉತ್ಸವ ನಡೆಯಲಿದೆ. ಪ್ರತಿದಿನ ಶ್ರೀ ದೇವಿಗೆ ವಿಶೇಷ ಪೂಜೆ, ಅಲಂಕಾರಗಳು ಜರುಗಲಿವೆ ಎಂದು ಸಮಿತಿ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೋಡಿಯಾಲ-ಹೊಸಪೇಟೆ, ಕವಲೆತ್ತು, ನಲವಾಗಲು, ಮಾಕನೂರು, ಕರಲಗೇರಿ ಗ್ರಾಮಗಳಿಗೆ ಮತ್ತು ಹರಿಹರ ಫಾಲಿಫೈಭರ್ಸ್ ಕಂಪನಿಗೆ ಹರಿಹರ ಕುಡಿಯುವ ನೀರು ಸರಬರಾಜಿನ ವಾಟರ್ ಸಪ್ಲೈ, ಸಿಂಥೈಟ್ ಫ್ಯಾಕ್ಟರಿಗಳಿಗೆ ಇಂದು ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಪದವಾಣಿ-84

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

| | |
|---|---|
| 2) ಗತಿಯನ್ನು ಹೊಂದಿರುವ ಅಭಿವೃದ್ಧಿ | 3 |
| 4) ಸ್ಥೂಲಕಾಯದವ | 3 |
| 5) ಬರದಲ್ಲಿ ಕಂಡ ಶವ | 4 |
| 6) ದ್ರವರೂಪದ ಲೋಹ | 4 |
| 8) ಕುಸುಮ ಮುಡಿದ ಹೂವು | 2 |
| 10) ರಜನಿಯಲ್ಲಿ ಅಡಗಿರುವ ಧೂಳು | 2 |
| 13) ಮಹಾರಾಣಿಯ ಪತಿ | 4 |
| 14) ಮೊಮ್ಮಗನ ಪುತ್ರ | 4 |
| 15) ಹತ್ತಿರದ | 3 |
| 16) ಆನೆಯನ್ನು ನಿಯಂತ್ರಿಸುವವ | 3 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ದೇವಿಯ ರೂಪವನ್ನು ವರ್ಣಿಸಿ ಶಂಕರಾಚಾರ್ಯರು ರಚಿಸಿದ ಸ್ತೋತ್ರ | 6 |
| 2) ಸಮರ್ಥಿಸು | 5 |
| 3) ಬಟ್ಟೆಯೂ ಆಗಬಲ್ಲ ಇದು ಆಕಾಶ | 3 |
| 5) ವರನಿಗೆ ಸಿಕ್ಕ ಸಂಪತ್ತು | 4 |
| 7) ಸುಳ್ಳು ವೇಷ ಕಟ್ಟಿ ಮೋಸ ಮಾಡುವಿಕೆ | 6 |
| 9) ಮದುವೆಯ ಗಂಡು | 4 |
| 11) ಜನರಲ್ಲಿ ಹಬ್ಬಿರುವ ವಿಷಯ | 5 |
| 12) ಬೀಜ ಬಿತ್ತಲು ಬಳಸುವ ಸಾಧನ | 3 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 83ರ ಉತ್ತರಗಳು :**

**ಎಡದಿಂದ ಬಲಕ್ಕೆ:** 1) ಬಂಡಾಯಗಾರ 2) ರಸನ 3) ದಿವಾನಗಿರಿ 4) ಶೈಶವ 8) ಮನೋನಿಗ್ರಹ 10) ಕಡಲ ತೀರ 11) ಅಶನ 12) ಪಲ್ಲವಿ.

**ಮೇಲಿನಿಂದ ಕೆಳಕ್ಕೆ :** 2) ರಸೀದಿ 5) ಯಕ್ಷಗಾನ 6) ನಮಾರ್ಧವ (ವರ್ಧಮಾನ) 7) ರಹಾಣಿಮ (ಮಣಿಹಾರ) 9) ರಿದಾಳ್ಳಕ (ಕಳ್ಳದಾರಿ) 11)ಅವಧಾನಿ 12) ಪಡುವಲ 13) ಹರವಿ.

## ವಿದ್ಯಾನಗರದ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದಲ್ಲಿ ಇಂದಿನಿಂದ ಪುರಾಣ

ದಾವಣಗೆರೆ ವಿದ್ಯಾನಗರದ ಶ್ರೀ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 24 ರವರೆಗೆ ಪ್ರವಚನ ಜರುಗುವುದು. ಇಂದು ಬೆಳಿಗ್ಗೆ 7 ಗಂಟೆಗೆ ಪೂಜೆಗೆ ಚಾಲನೆ ನೀಡಲಾಗುವುದು.

ಸಂಜೆ 6 ಗಂಟೆಗೆ ದೇವಿ ಪುರಾಣವು ಅಮರಯ್ಯ ಶಾಸ್ತ್ರಿಗಳು ಹಾಗೂ ಶರಣಯ್ಯ ಗವಾಯಿಗಳಿಂದ ನಡೆಯುವುದು.

ಪ್ರತಿದಿನ ಅನ್ನ ದಾಸೋಹ ನಡೆಯಲಿದೆ. ದಿನಾಂಕ 24 ರ ಮಂಗಳವಾರ ಸಂಜೆ 5 ಗಂಟೆಗೆ ಭಜನೆಯೊಂದಿಗೆ ಪಲ್ಲಕ್ಕಿ ಮೆರವಣಿಗೆಯು ಬನ್ನಿ ಮಂಟಪಕ್ಕೆ ಹೋಗಿ ಬನ್ನಿ ಮುಡಿಯುವ ಕಾರ್ಯ ಕ್ರಮವಿದೆ ಎಂದು ದೇವಸ್ಥಾನದ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ತಿಳಿಸಿದ್ದಾರೆ.

## ಸೆಪ್ಟೆಂಬರ್‌ಗಳಲ್ಲಿ ರಫ್ತು ಶೇ.2.6ರಷ್ಟು ಕುಸಿತ

ನವದೆಹಲಿ, ಅ. 14 – ಕಳೆದ ಸೆಪ್ಟೆಂಬರ್‌ನಲ್ಲಿ ರಫ್ತು ಪ್ರಮಾಣ ಶೇ.2.6ರಷ್ಟು ಕುಸಿದು 34.47 ಶತಕೋಟಿ ಡಾಲರ್‌ಗಳಿಗೆ ಸೀಮಿತವಾಗಿದೆ.

ಆಮದು ಸಹ ಶೇ.15ರಷ್ಟು ಕಡಿತವಾಗಿ 53.84 ಶತಕೋಟಿ ಡಾಲರ್‌ಗೆ ಇಳಿದಿದೆ. ವಿನಿಮಯ ಕೊರತೆ 19.37 ಶತಕೋಟಿ ಡಾಲರ್ ಆಗಿದೆ. ಸತತ ಹತ್ತು ತಿಂಗಳಿನಿಂದ ಆಮದು ಇಳಿಮುಖವಾಗಿದೆ.

# ಇಸ್ರೇಲ್ ಯುದ್ಧದ ಸಂದರ್ಭದಲ್ಲೂ ನಿರ್ಭಯವಾಗಿ ಸೇವೆ ಗೈಯುತ್ತಿರುವ ದೊಣ್ಣೆಹಳ್ಳಿ ನರ್ಸ್ ಪ್ರಿಯದರ್ಶಿನಿ





ಜಗಳೂರು, ಅ. 14 - ಇಸ್ರೇಲ್ ಮತ್ತು ಪ್ಯಾಲಿಸ್ತೀನ್ ನ ಹಮಾಸ್ ಉಗ್ರರ ವಾಯುದಾಳಿಯ ಸಂಘರ್ಷ ದಿನದಿಂದ ದಿನಕ್ಕೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಮಧ್ಯೆಯೂ ನಿರ್ಭಯದಿಂದ ತಾಲ್ಲೂಕಿನ ದೊಣ್ಣೆಹಳ್ಳಿ ಗ್ರಾಮದ ಪ್ರಿಯದರ್ಶಿನಿ (33) ಸ್ಟಾಫ್ ನರ್ಸ್ ವೃತ್ತಿಯಲ್ಲಿ ವಯೋವೃದ್ಧ ದಂಪತಿಗಳ ಸೇವೆ ಸಲ್ಲಿಸುತ್ತಿದ್ದಾರೆ.

ದೊಣ್ಣೆಹಳ್ಳಿ ಗ್ರಾಮದಲ್ಲಿ ಜನಿಸಿ ಶಿವಮೊಗ್ಗದಲ್ಲಿ ಜಿಎನ್‌ಎಂ ಮತ್ತು ಬಿಎಸ್ ಸಿ ನರ್ಸಿಂಗ್ ಕೋರ್ಸ್‌ನ ವ್ಯಾಸಂಗ ಮುಗಿಸಿ ತಾಲ್ಲೂಕಿನ ಮುಗ್ಗಿದ ರಾಗಿಹಳ್ಳಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿಶಾಲೆಯಲ್ಲಿ ಎರಡು ವರ್ಷಗಳ ಕಾಲ ವೃತ್ತಿ ಆರಂಭಿಸಿದ ಇವರು ನಂತರ ಬೆಂಗಳೂರು,ಉಡುಪಿ ಖಾಸಗಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಿದರು. ಇಸ್ರೇಲ್ ದೇಶದಲ್ಲಿ ಕಳೆದ 5 ವರ್ಷಗಳಿಂದ ವಯೋವೃದ್ಧ ದಂಪತಿಗಳ ಆರೋಗ್ಯ ಸೇವೆಯಲ್ಲಿ ತೊಡಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಸ್ವಗ್ರಾಮಕ್ಕೆ ಕರೆದರೂ ಬಾರದ ಮಗಳು :** ನನಗೆ 4 ಜನ ಹೆಣ್ಣುಮಕ್ಕಳಿದ್ದು ಅದರಲ್ಲಿ ಪ್ರಿಯದರ್ಶಿನಿಯೊಬ್ಬಳು ಇಸ್ರೇಲ್‌ನಲ್ಲಿ ಕೆಲಸಕ್ಕೆ ಹೋಗಿದ್ದು. ಅಲ್ಲಿ ಉತ್ತಮ ವೇತನ ಪಡೆದು ದೊಣ್ಣೆಹಳ್ಳಿ ಕಳೆದ 2 ವರ್ಷಗಳ ಹಿಂದೆ ಹೊಸ ಮನೆ ನಿರ್ಮಿಸಲು ಸಂಪೂರ್ಣ ಹಣ ಭರಿಸಿದ್ದಾಳೆ. ಕುಟುಂಬದ ನಿರ್ವಹಣೆಗೆ ನೆರವಾಗಿದ್ದಾರೆ. ಇದೀಗ ಇಸ್ರೇಲ್‌ನಲ್ಲಿ ಯುದ್ದ ನಡೆಯುತ್ತಿರುವ ಪರಿಣಾಮ ಸಾವು ನೋವುಗಳು ನಮಗೆ ಆತಂಕ ಎದುರಾಗಿದೆ. ಕೆಲಸ ತೊರೆದು ಭಾರತ ದೇಶಕ್ಕೆ ಮರಳಿ ಬಾರಮ್ಮ ಎಂದರೆ ಕೇಳುತ್ತಿಲ್ಲ. ವಯೋವೃದ್ದರ ಆರೋಗ್ಯ ಸೇವೆ ತೃಪ್ತಿ ತಂದಿದೆ. ಇನ್ನು 2024 ರ ಫೆ. ತಿಂಗಳಿಗೆ ಪಾಸ್ ಪೋರ್ಟ್ ಅವಧಿ ಮುಕ್ತಾಯವಾಗುತ್ತದೆ. ಆ ನಂತರ ಬರುವೆ ಎನ್ನುತ್ತಾಳೆ ಎಂದು ಪ್ರಿಯ ದರ್ಶಿನಿ ತಾಯಿ ಮಂಜುಳಾ ಅವರು ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದಿನಿಂದ ದಸರಾ ಕಾರ್ಯಕ್ರಮ



ಪಟ್ಟಣದ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ಶ್ರೀಕೋಟಿ ಮಾರೇಶ್ವರಿ ಮತ್ತು ಶ್ರೀ ಬೀರಲಿಂಗೇಶ್ವರ, ಶ್ರೀ ಬಸವೇಶ್ವರ ಹಾಗೂ ಶ್ರೀ ಚೌಡೇಶ್ವರಿ, ಶ್ರೀ ಗಂಗಮ್ಮ ದೇವಿ ದೇವಸ್ಥಾನಗಳಲ್ಲಿ ಇಂದಿನಿಂದ ದಸರಾ ಪೂಜಾ ಕಾರ್ಯಕ್ರಮಗಳು ನಡೆಯ ಲಿವೆ. ಮುಖ್ಯ ವೃತ್ತದಲ್ಲಿರುವ ಶ್ರೀ ಚೌಡೇ ಶ್ವರಿ, ಶ್ರೀ ಗಂಗಮ್ಮ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 24ರವರೆಗೆ ಪ್ರತಿದಿನ ಸಂಜೆ 6.30 ರಿಂದ 9 ಗಂಟೆವರೆಗೆ ಶ್ರೀ ದೇವಿ ಮಹಾತ್ಮೆ ಪುರಾಣ ಪ್ರವಚನ, ಭಜನೆ, ಪ್ರಸಾದ ವಿನಿಯೋಗ ಇರುತ್ತದೆ. ಇಂದು ಬೆಳಿಗ್ಗೆ 9 ಗಂಟೆಗೆ ಘಟಸ್ಥಾಪನೆ ಮಾಡಲಾಗುವುದು.

# ಗಾಜಾದಿಂದ ಹೊರ ಹೋಗಲು ಪರದಾಟ



ಡೀರ್ - ಅಲ್ - ಬಲಾಹ್, ಅ. 14 – ಗಾಜಾದ ಅರ್ಧದಷ್ಟು ಜನರು ಉತ್ತರದ ಭಾಗದಿಂದ ಹೊರ ಹೋಗುವಂತೆ ಇಸ್ರೇಲ್ ತಿಳಿಸಿರುವ ಹಿನ್ನೆಲೆಯಲ್ಲಿ, ಜನರು ತಮ್ಮ ಮನೆಗಳನ್ನು ಬಿಟ್ಟು ತೆರಳುತ್ತಿದ್ದಾರೆ. ಈ ನಡುವೆ, ಇಸ್ರೇಲ್ ಸೈನ್ಯ ಸೀಮಿತವಾಗಿ ಹಮಾಸ್ ವಿರುದ್ಧ ಕಾರ್ಯಾಚರಣೆ ನಡೆಸಿದೆ.

ಗಾಜಾದ ಜನರು ದಕ್ಷಿಣಕ್ಕೆ ತೆರಳ ಬೇಕೆಂದು ಇಸ್ರೇಲ್ ಸಾಮಾಜಿಕ ಜಾಲತಾಣ ಗಳ ಮೂಲಕ ತಿಳಿಸಿತ್ತು. ವೈಮಾನಿಕವಾಗಿ ಕರಪತ್ರಗಳನ್ನೂ ಚೆಲ್ಲಲಾಗಿತ್ತು. ಜನರು ತಮ್ಮ ಮನೆಗಳಲ್ಲೇ ಇರಬೇಕು ಎಂದು ಹಮಾಸ್ ಸಂಘಟನೆ ಕರೆ ನೀಡಿತ್ತು.

ಕ್ಷಿಪ್ರವಾಗಿ ಸ್ಥಳಾಂತರಗೊಳ್ಳುವಂತೆ ತಿಳಿಸುವುದು ಮಾನವ ಬಿಕ್ಕಟ್ಟಿಗೆ ಕಾರಣವಾಗಬಹುದು. ಆಸ್ಪತ್ರೆಯಲ್ಲಿರುವ ರೋಗಿಗಳು ಸ್ಥಳಾಂತರಗೊಳ್ಳಲು ಸಾಧ್ಯವಾಗದು ಎಂದು ವಿಶ್ವ ಸಂಸ್ಥೆ ಹಾಗೂ ಇತರೆ ನೆರವು ಗುಂಪುಗಳು ತಿಳಿಸಿದ್ದವು.

ಈ ನಡುವೆಯೇ, ಕುಟುಂಬಗಳು ಕಾರು, ಲಾರಿ ಹಾಗೂ ಕತ್ತೆ ಗಾಡಿಗಳ ಮೂಲಕ ಉತ್ತರ ಗಾಜಾದಿಂದ ಹೊರ ನಡೆಯುತ್ತಿದ್ದಾರೆ. ಗಾಜಾದಲ್ಲಿ ಆಹಾರ, ಇಂಧನ ಹಾಗೂ ನೀರಿನ ಪೂರೈಕೆ ಕಡಿಮೆಯಾಗುತ್ತಿದೆ. ಈ ನಡುವೆಯೇ, ಇಸ್ರೇಲ್ ವೈಮಾನಿಕ ದಾಳಿ ಮುಂದುವರೆಸಿದೆ.

ಲಕ್ಷಾಂತರ ಪ್ಯಾಲೆಸ್ತೇನಿಯನ್ನರು ಈಗಾಗಲೇ ತನ್ನ ಸಲಹೆಗೆ ಕಿವಿಗೊಟ್ಟು ದಕ್ಷಿಣದ ಕಡೆ ತೆರಳಿದ್ದಾರೆ ಎಂದು ಇಸ್ರೇಲ್ ಹೇಳಿದೆ. ಆದರೆ, ವಿಮಾನ ದಾಳಿಯಿಂದ ಹಾಳಾದ ರಸ್ತೆಗಳು ಹಾಗೂ ಇಂಧನ ಕೊರತೆಯಿಂದಾಗಿ ಜನರು ಸ್ಥಳಾಂತರಗೊಳ್ಳುವುದಕ್ಕೆ ತೀವ್ರ ಅಡ್ಡಿಯಾಗಿದೆ. ಸಾವಿರಾರು ಜನರು ವಿಶ್ವ ಸಂಸ್ಥೆ ನಡೆಸುತ್ತಿರುವ ಡೀರ್ ಅಲ್ - ಬಲಾಹ್ ಶಾಲೆಯಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಹಲವರು ಬಯಲಲ್ಲೇ ಮಲಗುವ ಪರಿಸ್ಥಿತಿ ಬಂದಿದೆ.

ಪ್ಯಾಲೆಸ್ತೇನಿನ ಜನರು ಸಾಮೂಹಿಕವಾಗಿ ತನ್ನ ನೆಲೆಗೆ ಬರಬಹುದು ಎಂದು ಕಳವಳಗೊಂಡಿರುವ ಈಜಿಪ್ಟ್ ಅಧಿಕಾರಿಗಳು, ಗಡಿಗಳಲ್ಲಿ ತಾತ್ಕಾಲಿಕ ತಡೆ ಗೋಡೆಗಳನ್ನು ಅಳವಡಿಸಿದ್ದಾರೆ. ಸಾವಿರಾರು ಸೈನಿಕರು ರಫಾ ಗಡಿಯಲ್ಲಿ ನಿಯೋಜನೆಗೊಂಡಿ ದ್ದಾರೆ.

ಸಂಘರ್ಷ ಆರಂಭವಾದ ನಂತರ ಶುಕ್ರವಾರದಂದು ಮೊದಲ ಬಾರಿಗೆ ಇಸ್ರೇಲ್ ಪಡೆಗಳು ಗಾಜಾ ನೆಲದಲ್ಲಿ ಕಾರ್ಯಾಚರಣೆ ಆರಂಭಿಸಿವೆ. ದಾಳಿಯ ನಂತರ ಇಸ್ರೇಲ್ ಪಡೆಗಳು ವಾಪಸ್ಸಾಗಿವೆ.

ಗಾಜಾಗೆ ತೆರಳಲು ಇಸ್ರೇಲ್ 3.60 ಲಕ್ಷ ಮೀಸಲು ಪಡೆಗಳನ್ನು ಸಜ್ಜುಗೊಳಿಸಿದೆ. ಆದರೆ, ಯಾವಾಗಿನಿಂದ ಭೂ ಮಾರ್ಗದ ಮೂಲಕ ಕಾರ್ಯಾಚರಣೆ ನಡೆಸಲಾಗುವುದು ಎಂಬುದು ಸ್ಪಷ್ಟವಾಗಿಲ್ಲ. ಇಸ್ರೇಲ್ ಸಾರ್ವಜನಿಕರು ಸೈನಿಕ ಕಾರ್ಯಾಚರಣೆ ನಡೆಸುವುದನ್ನು ಬೆಂಬಲಿಸುತ್ತಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದಿನಿಂದ ಪುರಾಣ

ಶ್ರೀ ಗುರು ಕಬೀರಾನಂದಸ್ವಾಮಿ ಸಿದ್ಧಾಶ್ರಮ, ಶ್ರೀ ಸಿದ್ಧಾರೂಢ ಮಠ ಟ್ರಸ್ಟ್ ವತಿಯಿಂದ ಶರನ್ನವರಾತ್ರಿ ಪ್ರಯುಕ್ತ ಶ್ರೀ ದೇವಿ ಪುರಾಣ ಸಮಾರಂಭವನ್ನು ಇಂದಿನಿಂದ ಇದೇ ದಿನಾಂಕ 24 ರವರೆಗೆ ಹಮ್ಮಿಕೊಳ್ಳಲಾಗಿದೆ.

## ಮನೆ ಬಾಗಿಲು ಮುರಿದು 352 ಗ್ರಾಂ ಬಂಗಾರದ ಅಭರಣ ಕಳ್ಳತನ

**ಹರಿಹರ**

ಹರಿಹರ, ಅ. 14- ಇಲ್ಲಿನ ವಿದ್ಯಾನಗರ ಬಿ ಬ್ಲಾಕ್ 5 ನೇ ಮೇನ್‌ನಲ್ಲಿರುವ ಮನೆಯೊಂದರ ಬಾಗಿಲು ಮುರಿದು 352 ಗ್ರಾಂ. ತೂಕದ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿದ ಘಟನೆ ನಡೆದಿದೆ.

ವಿದ್ಯಾನಗರ ವಾಸಿ ರೇಣುಕಮ್ಮ ಅ. 10 ರಂದು ಬೆಂಗಳೂರಿನ ಮಗಳ ಮನೆಗೆ ತೆರಳಿರುವುದನ್ನು ಗಮನಿಸಿದ ಕಳ್ಳರು ವಿವಿಧ ಬಗೆಯ ಬಂಗಾರದ ಆಭರಣಗಳು (ಬಂಗಾರದ ಬಳೆ, ಕಾಸಿನ ಸರ, ಜುಮುಖಿ, ಉಂಗುರ, ಬ್ರಾಸ್‌ಲೈಟ್, ಕಿವಿಯ ಓಲೆ) ಸೇರಿದಂತೆ 21 ಲಕ್ಷದ 28 ಸಾವಿರ ರೂ. ಬೆಲೆ ಬಾಳುವ 352 ಗ್ರಾಂ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿದ್ದಾರೆ.

ಸ್ಥಳಕ್ಕೆ ಪಿಎಸ್‌ಐ ದೇವಾನಂದ್, ಸಿಬ್ಬಂದಿಗಳಾದ ರವಿಕುಮಾರ್, ದೇವರಾಜ್, ಮಂಜುನಾಥ, ಕೆ. ಮಂಜುನಾಥ್ ಭೇಟಿ ಮಾಡಿ ಸ್ಥಳ ಪರಿಶೀಲನೆ ನಡೆಸಿದರು.


**6ನೇ ವರ್ಷದ ಪುಣ್ಯಸ್ಮರಣೆ**



ಜನನ 01–08–1955

ಮರಣ 15–10–2017

**ದಿ|| ಶ್ರೀಮತಿ ಚಾರ್ಮಣಿ ಅನ್ನಪೂರ್ಣ**

ಅಮ್ಮ ನೀಡಿದ ಜನ್ಮ – ಅಮ್ಮ ನೀಡಿದ ಪ್ರೀತಿ
ಅಮ್ಮ ನೀಡಿದ ವಿದ್ಯೆ – ಅಮ್ಮ ನೀಡಿದ ಬದುಕು
ಇವೆಲ್ಲವೂ ಬೆಲೆ ಕಟ್ಟಲಾಗದ್ದು.
ಅಮ್ಮ ಯಾವತ್ತೂ ನೆನಪಲ್ಲಿರುವವರು.
6 ವರ್ಷದ ಹಿಂದೆ ಅಮ್ಮನನ್ನು ಕಳೆದುಕೊಂಡ
ಈ ದಿನದಂದು ಅವರಿಗೊಂದು ಭಾವಪೂರ್ಣ ನಮನ.

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

**ಶ್ರೀ ಶಿವಕುಮಾರ ಚಾರ್ಮಣಿ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಚಾರ್ಮಣಿ ಹಲ್ಲರ್ & ಫ್ಲೋರ್ ಮಿಲ್ ಸಿಬ್ಬಂಧಿ ವರ್ಗದವರು, ಅನ್ನಪೂರ್ಣ ಕಮ್ಯೂನಿಕೇಷನ್ಸ್ ಸಿಬ್ಬಂಧಿ ವರ್ಗದವರು ಹಾಗೂ ಬಂಧು–ಮಿತ್ರರು.**



**ಐದನೇ ವರ್ಷದ ಪುಣ್ಯಸ್ಮರಣೆ**



ದಾವಣಗೆರೆ ಪಿ.ಜೆ. ಬಡಾವಣೆ ವಾಸಿ, **ರವೀಂದ್ರನಾಥ್‌ರವರ** ಧರ್ಮಪತ್ನಿ

**ದಿ|| ಶ್ರೀಮತಿ ಉಮಾ ಕೆ.ಸಿ.**

ಮರಣ 15.10.2018

*ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳು ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ...ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ...*

ಸದಾ ನಿಮ್ಮ ಸ್ಮರಣೆಯಲ್ಲಿರುವ : ಪತಿ : **ರವೀಂದ್ರನಾಥ್ ಕೆ.ಸಿ.**

ಮಕ್ಕಳು : **ಶ್ರೀಮತಿ ನೀಮಾ ಡಿ.ಆರ್., ಶ್ರೀಮತಿ ಸೀಮಾ ಡಿ.ಆರ್.,**


ಮೊಮ್ಮಕ್ಕಳು : **ನಿಶ್ಚಲ್, ಆಕಾಶ್ ಹಾಗೂ ಬಂಧು-ಮಿತ್ರರು, ದಾವಣಗೆರೆ.**


### ಹರ್ಷ ಸಾರಂಗ ಮಠದ ನಿಧನ



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ, ಸೆಂಟ್ ಜಾನ್ಸ್ ಸ್ಕೂಲ್ ಹತ್ತಿರದ ವಾಸಿ ಹರ್ಷ ಸಾರಂಗ ಮಠದ (42) ಅವರು ದಿನಾಂಕ : 14.10.2023 ರ ಶನಿವಾರ ರಾತ್ರಿ 7 ಗಂಟೆಗೆ ನಿಧನರಾದರು. ಪತ್ನಿ, ತಮ್ಮ, ಅಕ್ಕ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 15.10.2023 ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಹರಿಹರದಲ್ಲಿ ಶರನ್ನವರಾತ್ರಿ ಮಹೋತ್ಸವ



ಹರಿಹರ, ಅ,14- ನಗರದ ಹೊಸಭರಂಪುರ ಬಡಾವಣೆಯ ಕಸಬಾ ಶ್ರೀ ಗ್ರಾಮದೇವತೆ ಊರಮ್ಮದೇವಿಯ ಶರನ್ನವರಾತ್ರಿ 14 ನೇ ಮಹೋತ್ಸವದ ಅಂಗವಾಗಿ ನಾಳೆ ದಿನಾಂಕ 15 ರಿಂದ 24 ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪೂಜಾರ್ ಈರಣ್ಣ, ಕಾರ್ಯದರ್ಶಿ ಕೆ.ಬಿ. ರಾಜಶೇಖರ್ ತಿಳಿಸಿದ್ದಾರೆ. ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಮಾತನಾಡಿದ ಅವರು, ಪ್ರತಿದಿನ ಶ್ರೀ ದೇವಿಗೆ ವಿಶೇಷ ಅಲಂಕಾರವನ್ನು ಮಾಡಲಾಗುತ್ತದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಶ್ರೀ ಗ್ರಾಮದೇವತೆ ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷ ಮಜ್ಜಿಗೆ ಪಾಲಾಕ್ಷಪ್ಪ, ಅಧ್ಯಕ್ಷ ಪೂಜಾರ್ ಈರಣ್ಣ, ಉಪಾಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಕೆ. ಬಿ. ರಾಜಶೇಖರ್, ಸಹ ಕಾರ್ಯದರ್ಶಿ ಕೆ, ಗುತ್ತೆಪ್ಪ, ಖಜಾಂಚಿ ಸುರೇಶ್ ಚಂದಪೂರ್, ನಿರ್ದೇಶಕ ರಾದ ಎಂ. ಚಿದಾನಂದ ಕಂಚಿಕೇರಿ, ನೀಲಗುಂದ ಪರಮೇಶ್ವರಪ್ಪ, ಈರಣ್ಣ ರುದ್ರಪ್ಪ ಹಾವನೂರು, ರಾಘು ಚೌಗಲೆ, ಮಜ್ಜಿಗೆ ಚಂದ್ರಪ್ಪ, ಬಸವರಾಜಪ್ಪ ಹರಪನಹಳ್ಳಿ, ಹಣಿಗಿ ಸುರೇಶ್, ಶಿವಾನಂದ ದಾವಣಗೆರೆ, ಸಿಂಗಾಡಿ ಸಿದ್ದಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಟೇಲ್, ಬಣಕಾರ್ ಸಿದ್ದಪ್ಪ, ಶ್ಯಾನಭೋಗ ಹರಿಶಂಕರ್, ಅರ್ಚಕರು ನಾಗರಾಜಾಚಾರ್, ನಂಜುಂಡಾಚಾರ್ ಹಾಗು ಇತರರು ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಬಿಜೆಪಿಗೆ ಸಮರ್ಥ ನಾಯಕ ಇಲ್ಲ: ರೇಣುಕಾಚಾರ್ಯ



ದಾವಣಗೆರೆ, ಅ.14- ರಾಜ್ಯದಲ್ಲಿ ಬಿಜೆಪಿಗೆ ಸಮರ್ಥ ನಾಯಕ ಇಲ್ಲ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ನಗರದಲ್ಲಿಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಕ್ಷ ಸಂಘಟನೆ ಮಾಡಿದ ಬಿ.ಎಸ್. ಯಡಿಯೂರಪ್ಪ ಅವರ ಕೈ ಕಟ್ಟಿಹಾಕಲಾಗಿದೆ ಎಂದು ಆರೋಪಿಸಿದರು.

ಯಡಿಯೂರಪ್ಪ ಅವರಿಗೆ ಪ್ರವಾಸ ಮಾಡಲು ಅವಕಾಶ ನೀಡುತ್ತಿಲ್ಲ. ಬಿಜೆಪಿ ಕಟ್ಟಿ ಬೆಳೆಸಿದವರನ್ನು ಮೂಲೆಗುಂಪು ಮಾಡಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಮುಳುಗುತ್ತಿರುವ ಹಡಗು ಅಂತ ನಾವು ಹೇಳುತ್ತಿದ್ದೆವು. ಆದರೆ ಇಂದು ಬಿಜೆಪಿ ಮುಳುಗುತ್ತಿರುವ ಹಡಗು ಅಂತ ನಮ್ಮವರೇ ಹೇಳುವ ಕಾಲ ಬಂದಿದೆ ಎಂದರು.

ಬಿಜೆಪಿಯಲ್ಲಿ ಕಾರ್ಪೊರೇಟ್ ರೀತಿ ತಂಡ ಕಟ್ಟಿಕೊಂಡು ಕೆಲಸ ಮಾಡುತ್ತಿದ್ದಾರೆ. ಗೆದ್ದಲು ಕಟ್ಟಿದ ಹುತ್ತದಲ್ಲಿ ಹಾವುಗಳು ಬಂದು ವಾಸವಾದಂತೆ ಆಗಿದೆ. ಸಮರ್ಥ ನಾಯಕನನ್ನು ಆಯ್ಕೆ ಮಾಡಿದರೆ ಪಕ್ಷದಲ್ಲಿ ಮತ್ತೆ ಹೊಸತನ ಬರುತ್ತದೆ ಎಂದವರು ಹೇಳಿದರು.

ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡುವ ಬದಲಾಗಿ ಅವರ ಕೈಗೆ ಅಧಿಕಾರ ಕೊಟ್ಟು ನೋಡಿ ಎಂದು ಮುಖಂಡರಿಗೆ ಹೇಳಿದ ರೇಣುಕಾಚಾರ್ಯ, ರಾಜ್ಯದಲ್ಲಿ ಇದೇ ಪರಿಸ್ಥಿತಿ ಮುಂದುವರೆದರೆ ಲೋಕಸಭೆ ಚುನಾವಣೆ ಹೊತ್ತಿಗೆ ಪಕ್ಷ ಬಿಡುವವರ ಸಂಖ್ಯೆ ಇನ್ನೂ ಹೆಚ್ಚಾಗಲಿದೆ ಎಂದರು.

# ಒಕ್ಕಲಿಗರು ಸಂಸ್ಕೃತಿ ಹೀನ ಪಶುಗಳು ಎಂದ ಭಗವಾನ್

**ಒಕ್ಕಲಿಗ ಸಮುದಾಯದಿಂದ ತೀವ್ರ ಆಕ್ರೋಶ, ಪ್ರತಿಭಟನೆ**

ಮೈಸೂರು, ಅ. 14 - ಒಕ್ಕಲಿಗರು ಸಂಸ್ಕೃತಿ ಹೀನ ಪಶುಗಳು ಎಂದು ಪ್ರಗತಿಪರ ವಿಚಾರವಾದಿ ಕೆ.ಎಸ್. ಭಗವಾನ್ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ. ಭಗವಾನ್ ಹೇಳಿಕೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಒಕ್ಕಲಿಗ ಸಂಘಟನೆಯವರು ಅವರ ಮನೆ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ನಂತರ ಭಗವಾನ್ ಮನೆಗೆ ಭದ್ರತೆ ಹೆಚ್ಚಿಸಲಾಗಿದೆ.

ಮಹಿಷ ದಸರಾ ಆಚರಣೆ ಸಮಿತಿಯಿಂದ ಇಲ್ಲಿನ ಪುರಭವನದ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡುವಾಗ ವಿವಾದಿತ ಹೇಳಿಕೆ ನೀಡಿದ್ದಾರೆ. ಒಕ್ಕಲಿಗರು ಸಂಸ್ಕೃತಿ ಹೀನ ಪಶುಗಳು. ಇದು ನನ್ನ ಮಾತಲ್ಲ. ಕುವೆಂಪು ಅವರದ್ದು ಎಂದು ಭಗವಾನ್ ಹೇಳಿದ್ದರು.

ಒಕ್ಕಲಿಗರ ಬಗ್ಗೆ ಭಗವಾನ್ ಆಡಿರುವ ಮಾತುಗಳನ್ನು ಒಪ್ಪಲಾಗದು. ಅವರ ಮಾತುಗಳನ್ನು ಅವರ ಕುಟುಂಬದವರೇ ಒಪ್ಪುವುದಿಲ್ಲ. ಅವರು ಮಾನಸಿಕ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು.

ಮಾನಸಿಕ ಅಸ್ವಸ್ಥರಾಗಿರಬೇಕು ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ ಶಾಸಕ ಆರ್. ಅಶೋಕ್ ಮಾತನಾಡಿ, ಭಗವಾನ್ ಅವಹೇಳನಕಾರಿಯಾಗಿ ಮಾತಾಡಿ ಒಕ್ಕಲಿಗ ಜನಾಂಗಕ್ಕೆ ಅವಮಾನ ಮಾಡಿದ್ದಾರೆ ಎಂದಿದ್ದಾರೆ.

## ನಗರದಲ್ಲಿ ಇಂದು 'ಮಣ್ಣೇ ಮೊದಲು' ಕವನ ಸಂಕಲನ ಜನಾರ್ಪಣೆ ಸಮಾರಂಭ

ವೀರಲೋಕ ಪ್ರಕಾಶನ (ಬೆಂಗಳೂರು) ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಪ್ರತಿಭಾನ್ವಿತ ಸಾಹಿತಿ ಪಾಪು ಗುರು ಅವರ 'ಮಣ್ಣೇ ಮೊದಲು' ಕವನ ಸಂಕಲನ ಜನಾರ್ಪಣೆ ಸಮಾರಂಭವು ಇಂದು ಬೆಳಿಗ್ಗೆ 10.50ಕ್ಕೆ ಮಹಾನಗರ ಪಾಲಿಕೆ ಆವರಣದಲ್ಲಿರುವ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಾಲಯದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಶೋಧಕರಾದ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ವಹಿಸಲಿದ್ದಾರೆ. ಕೃತಿಯ ಜನಾರ್ಪಣೆಯನ್ನು ಜಾನಪದ ವಿದ್ವಾಂಸರಾದ ಡಾ. ಎಂ. ಜಿ. ಈಶ್ವರಪ್ಪ ಮಾಡಲಿದ್ದಾರೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ (4ನೇ ಪುಟಕ್ಕೆ)

# ಎಸ್‌ಎಸ್ ಕೇರ್ ಟ್ರಸ್ಟ್‌ನಿಂದ ಸಂಚಾರಿ ಬಸ್

## ವೈದ್ಯಕೀಯ ಸೇವೆಗಳನ್ನು ನೇರವಾಗಿ ಹಳ್ಳಿಗಳಿಗೆ ತಲುಪಿಸುವ ಗುರಿ: ಡಾ ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಅ.14- ಎಸ್‌ಎಸ್ ಕೇರ್ ಟ್ರಸ್ಟ್ ಹಿಂದುಳಿದ ಸಮುದಾಯಗಳಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳನ್ನು ತಲುಪಿಸಲು ಮೊಬೈಲ್ ವೈದ್ಯಕೀಯ ಬಸ್ಸಿನ ವ್ಯವಸ್ಥೆ ಮಾಡಿದ್ದು, ಈ ಕಾರ್ಯಕ್ರಮವು ಸಮಾಲೋಚನೆಗಳು ಮತ್ತು ತನಿಖೆಗಳು ಸೇರಿದಂತೆ, ಅಗತ್ಯ ವೈದ್ಯಕೀಯ ಸೇವೆಗಳನ್ನು ನೇರವಾಗಿ ಹಳ್ಳಿಗಳಿಗೆ ತಲುಪಿಸುವ ಗುರಿಯನ್ನು ಹೊಂದಿದೆ ಎಂದು ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಮೊಬೈಲ್ ಮೆಡಿಕಲ್ ಬಸ್ ಆರಂಭಿಕ ಹಂತದಲ್ಲಿ ಕಾಯಿಲೆಗಳನ್ನು ಪತ್ತೆ ಹಚ್ಚುವುದು ಹಾಗೂ ಚಿಕಿತ್ಸೆಯನ್ನು ನೀಡುವುದು, ಭೌಗೋಳಿಕ ಮತ್ತು ಆರ್ಥಿಕ ನಿರ್ಬಂಧಗಳಿಂದಾಗಿ ಆರೋಗ್ಯ ಸೇವೆಯಿಂದ ವಂಚಿತರಾದ ಹಳ್ಳಿಗರಿಗೆ ಇದು ಪ್ರಮುಖ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಆರೋಗ್ಯ ಸೇವೆಗಳನ್ನು ಅವರ ಮನೆ ಬಾಗಿಲಿಗೆ ಕೊಂಡೊಯ್ಯುವ ಮೂಲಕ, ಈ ನವೀನ ಯೋಜನೆಯು ಆರೋಗ್ಯದ ಅಸಮಾನತೆಗಳಲ್ಲಿನ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ ಎಂದರು.

**ಸಮಾಲೋಚನೆ ಸೇವೆಗಳು:** ವೈದ್ಯರು ಸೇರಿದಂತೆ ಅನುಭವಿ ಆರೋಗ್ಯ ವೃತ್ತಿಪರರು ವೈದ್ಯಕೀಯ ಸಮಾಲೋಚನೆಗಳನ್ನು ಒದಗಿಸಲು ಮತ್ತು ಆರೋಗ್ಯ ಕಾಳಜಿಗಳನ್ನು ಪರಿಹರಿಸುತ್ತಾರೆ. ರೋಗಿಗಳು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ವೈಯಕ್ತಿಕ ಆರೈಕೆ ಮತ್ತು ಸಲಹೆಯನ್ನು ಸ್ವೀಕರಿಸುತ್ತಾರೆ.

**ತನಿಖೆಗಳು:** ರಕ್ತ ಪರೀಕ್ಷೆಗಳು, ಮೂಲಭೂತ ತಪಾಸಣೆಗಳು ಮತ್ತು ಇತರೆ ಅಗತ್ಯ ತನಿಖೆಗಳನ್ನು ನೀಡಲು ಮೊಬೈಲ್ ವೈದ್ಯಕೀಯ ಬಸ್ ಅತ್ಯಾಧುನಿಕ ರೋಗನಿರ್ಣಯ ಸಾಧನಗಳನ್ನು ಹೊಂದಿದೆ.

**ಔಷಧಾಲಯ:** ಬಸ್ಸಿನೊಳಗೆ ಸುಸಜ್ಜಿತ ವಾದ ಔಷಧಾಲಯವು ಸೂಚಿಸಿದ ಔಷಧಿ ಗಳನ್ನು ಒದಗಿಸುತ್ತದೆ, ರೋಗಿಗಳು ತಕ್ಷಣವೇ ತಮ್ಮ ಚಿಕಿತ್ಸಾ ಕ್ರಮವನ್ನು ಪ್ರಾರಂಭಿಸ ಬಹುದು ಎಂದು ಖಚಿತಪಡಿಸುತ್ತದೆ.

**ಆರೋಗ್ಯ ಶಿಕ್ಷಣ:** ಆರೋಗ್ಯ ಜಾಗೃತಿ, ಆರೈಕೆ ಮಾಹಿತಿ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಸಲಹೆಗಳನ್ನು ನೀಡುವ ಶೈಕ್ಷಣಿಕ ಕೇಂದ್ರವಾಗಿಯೂ ಬಸ್ ಕಾರ್ಯನಿರ್ವಹಿಸುತ್ತದೆ.

**ಸಮುದಾಯ ತೊಡಗಿಸಿಕೊಳ್ಳುವಿಕೆ:** ಎಸ್‌ಎಸ್ ಕೇರ್ ಟ್ರಸ್ಟ್ ಸಮುದಾಯದ ಸಬಲೀಕರಣಕ್ಕೆ ಬದ್ಧವಾಗಿದೆ. ಹಳ್ಳಿಗರು ಆರೋಗ್ಯ ವೃತ್ತಿಪರರೊಂದಿಗೆ ತೊಡಗಿಸಿಕೊಳ್ಳಲು, ಪ್ರಶ್ನೆಗಳನ್ನು ಕೇಳಲು ಮತ್ತು ಆರೋಗ್ಯ ಪ್ರಚಾರ ಚಟುವಟಿಕೆಗಳಲ್ಲಿ (4ನೇ ಪುಟಕ್ಕೆ)

# ಗಣಪತಿ ಶೋಭಾಯಾತ್ರೆ ಅದ್ಧೂರಿ

## ಡಿಜೆಗಳ ಅಬ್ಬರ, ಬಿಸಿಲನ್ನೂ ಲೆಕ್ಕಿಸದೆ ಕುಣಿದ ಯುವ ಪಡೆ





ದಾವಣಗೆರೆ, ಅ.14- ನಗರದ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಹಿಂದೂ ಮಹಾ ಗಣಪತಿ ಮೂರ್ತಿ ವಿಸರ್ಜನೆಯ ಶೋಭಾ ಯಾತ್ರೆ ನಗರದಲ್ಲಿ ಅದ್ಧೂರಿಯಾಗಿ ನೆರವೇರಿತು.

ಶೋಭಾಯಾತ್ರೆಯಲ್ಲಿ ಐದು ಡಿಜೆಗಳನ್ನು ತರಿಸಲಾಗಿತ್ತು. ಡಿಜೆ ಅಬ್ಬರವೇ ಶೋಭಾಯಾತ್ರೆಯ ಕೇಂದ್ರ ಬಿಂದುವಾಗಿತ್ತು. ದಾವಣಗೆರೆ ಸೇರಿದಂತೆ ಸುತ್ತ ಮುತ್ತಲಿನ ಜಿಲ್ಲೆಗಳಿಂದಲೂ ಯುವಕರು ಆಗಮಿಸಿ ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದರು.

ಮಹಿಳೆಯರಿಗಾಗಿ ಪ್ರತ್ಯೇಕ ಡಿಜೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಯುವಕರನ್ನೂ ನಾಚಿಸುವಂತೆ ಯುವತಿಯರು, ಮಹಿಳೆಯರು ಹೆಜ್ಜೆ ಹಾಕಿದರು. ಬಿಸಿಲಿಗೆ ಬೆವರಿಳಿಯುತ್ತಿದ್ದರೂ ಬಹುತೇಕ ಹುಡುಗಿಯರು ಮಾಸ್ಕ್ ಧರಿಸಿಯೇ ಕುಣಿಯುತ್ತಿದ್ದರು.

ಯಾತ್ರೆಯ ಆರಂಭದಲ್ಲಿ ಡಿಜೆಗಳು. ನಂತರ ನಾಸಿಕ್ ಡೋಲು, ಡೊಳ್ಳು ತಂಡಗಳು, ಸ್ತಬ್ಧ ಚಿತ್ರಗಳ ಮೆರವಣಿಗೆ, ಕೊನೆಯಲ್ಲಿ ಗಣೇಶನ ಮೂರ್ತಿಗಳ ಮೆರವಣಿಗೆ. ಹೀಗಿದ್ದ ಮೆರವಣಿಗೆಯಲ್ಲಿ ಕಲಾ ತಂಡಗಳು ಹಾಗೂ ಗಣೇಶನ ಮೂರ್ತಿಗಳ ಬಳಿ ಬೆರಳೆಣಿಕೆಯಷ್ಟು ಜನ ಮಾತ್ರ ಇರುತ್ತಿದ್ದರು. ಡಿಜೆ ಅಬ್ಬರಕ್ಕೆ ಕಲಾ ತಂಡಗಳ ಪ್ರದರ್ಶನ ಗೌಣ ಎನಿಸಿತ್ತು.

ಬೆಳಿಗ್ಗೆ 10 ಗಂಟೆ ವೇಳೆಗಾಗಲೇ ಕೇಸರಿ ಶಾಲು ಧರಿಸಿ ಯುವಕರು ಹೈಸ್ಕೂಲ್ ಮೈದಾನ ಸೇರತೊಡಗಿದರು. 11.30ರ ಸುಮಾರಿಗೆ ಮೆರವಣಿಗೆಗೆ ಚಾಲನೆ ನೀಡಲಾಯಿತು. ವಿವಿಧ ಭಾಗಗಳಿಂದ ಮಧ್ಯಾಹ್ನವಾದರೂ ಯುವಕರು ಬೈಕುಗಳು ಸೇರಿದಂತೆ ವಿವಿಧ ವಾಹನಗಳ ಮೂಲಕ ಆಗಮಿಸುತ್ತಲೇ ಇದ್ದರು. ಮೆರವಣಿಗೆ ಜಯದೇವ ವೃತ್ತಕ್ಕೆ ಬರುವಷ್ಟರಲ್ಲಿ ಆರಂಭದಲ್ಲಿದ್ದ ಸಂಖ್ಯೆ ದುಪ್ಪಟ್ಟಾಗಿತ್ತು. ಜಯದೇವ ವೃತ್ತದಲ್ಲಿ ಕ್ರೇನ್ ಮೂಲಕ ಗಣೇಶನ ವಿಗ್ರಹಕ್ಕೆ ಪುಷ್ಪವೃಷ್ಟಿ ಮಾಡಲಾಯಿತು.

ಚಿತ್ರನಟರ ಅಥವಾ ಯಾವುದೇ ವ್ಯಕ್ತಿಗಳ ಭಾವಚಿತ್ರವಿರುವ ಬಾವುಟಗಳನ್ನು ಮೆರವಣಿಗೆಯಲ್ಲಿ ಪ್ರದರ್ಶಿಸಬಾರದು ಎಂದು ಸಂಘಟಕರು ಮಾಡಿದ್ದ ಮನವಿಯ ಹೊರತಾಗಿಯೂ ಅಲ್ಲಲ್ಲಿ, ಸುದೀಪ್ ಬಾವುಟಗಳು ಕಂಡು ಬಂದವು. ಡಾ. ಅಂಬೇಡ್ಕರ್ ಚಿತ್ರದ ಬಾವುಟವೂ ಇತ್ತು.

ಹೈಸ್ಕೂಲ್ ಮೈದಾನದಿಂದ ಆರಂಭವಾಗುವ ಶೋಭಾಯಾತ್ರೆ, ಎವಿಕೆ ರಸ್ತೆ, ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಲಾಯರ್ ರೋಡ್ ಮೂಲಕ ಪಿಬಿ ರಸ್ತೆ ಸೇರಿ, ಅಲ್ಲಿಂದ ಗಾಂಧಿ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ ತಲುಪಿ ಮುಕ್ತಾಯವಾಯಿತು. ಈ ಎಲ್ಲಾ ಮಾರ್ಗಗಳಲ್ಲಿ ಸ್ವಯಂ ಪ್ರೇರಿತವಾಗಿ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು. ಸಾರ್ವಜನಿಕರು, ಕಾಂಪೌಂಡ್, ಕಟ್ಟಡಗಳನ್ನು ಏರಿ ಯಾತ್ರೆ ವೀಕ್ಷಿಸುತ್ತಾ, ಮೊಬೈಲ್‌ಗಳ ಮೂಲಕ ಯಾತ್ರಾ ದೃಶ್ಯಗಳನ್ನು ಸೆರೆ ಹಿಡಿಯುತ್ತಿದ್ದರು.

**ನೀರು, ಉಪಹಾರ ವ್ಯವಸ್ಥೆ:** ಕಳೆದ ಬಾರಿಯಂತೆ ಈ ಬಾರಿಯೂ ನಗರದ ದಾನಿಗಳ ಸಹಕಾರದಿಂದ ಮೆರವಣಿಗೆ ಸಾಗುವ ಮಾರ್ಗದಲ್ಲಿ ಉಪಹಾರ, ಕುಡಿಯುವ ನೀರು, ಮಜ್ಜಿಗೆಯ ವ್ಯವಸ್ಥೆ ಮಾಡಲಾಗಿತ್ತು.

ಸಾರ್ವಜನಿಕ ಹಿಂದೂ ಮಹಾಗಣಪತಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಜೊಳ್ಳಿ ಗುರು ನೇತೃತ್ವದಲ್ಲಿ 6ನೇ ವರ್ಷದ ಸಾರ್ವಜನಿಕ ಹಿಂದೂ ಮಹಾಗಣಪತಿಯನ್ನು ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗಿತ್ತು.

**ಪೊಲೀಸ್ ಮುಂಜಾಗ್ರತೆ:** ಶೋಭಾಯಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಂಡಿತ್ತು. ಎಸ್ಪಿ ಉಮಾ ಪ್ರಶಾಂತ್ ಎವಿಕೆ ಕಾಲೇಜು ರಸ್ತೆಗೆ ಆಗಮಿಸಿ ಪರಿಶೀಲಿಸಿದರು. ಶಿವಮೊಗ್ಗದಲ್ಲಿ ನಡೆದಿದ್ದ ಕೋಮು ಗಲಭೆ ಹಾಗೂ ಮೊನ್ನೆಯಷ್ಟೇ (4ನೇ ಪುಟಕ್ಕೆ)

### ಶೋಭಾಯಾತ್ರೆಗೆ ಎಸ್.ಎ. ರವೀಂದ್ರನಾಥ್ ಚಾಲನೆ

**ಹೈಸ್ಕೂಲ್ ಮೈದಾನದಲ್ಲಿ ಬೆಳಿಗ್ಗೆ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಶೋಭಾಯಾತ್ರೆಗೆ ಚಾಲನೆ ನೀಡಿದರು. ಮಾರ್ಗ ಮಧ್ಯದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಆಗಮಿಸಿ, ಡಿಜೆ ಟ್ರ್ಯಾಕ್ಟರ್ ಏರಿ ನೆರೆದಿದ್ದ ಯುವಕರಿಗೆ ಕೈ ಬೀಸಿದರು. ಈ ವೇಳೆ ಅವರು ಮಾತನಾಡಲು ಬಾಗಿದಾಗ ಅಭಿಮಾನಿಯೊಬ್ಬ ಅವರಿಗೆ ಮುತ್ತು ಕೊಡಲು ಹೋದ ಘಟನೆಯೂ ನಡೆಯಿತು. ಮೆರವಣಿಗೆ ಜಯದೇವ ವೃತ್ತಕ್ಕೆ ಆಗಮಿಸಿದಾಗ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಆಗಮಿಸಿದರು. ಕ್ರೇನ್ ಏರಿ ಕೈ ಬೀಸಿದರು. ನಂತರ ಕಾರ್ಯಕರ್ತರು ಅವರನ್ನು ಎತ್ತಿಕೊಂಡು ಕುಣಿದಾಡಿದರು. ಮೆರವಣಿಗೆಯಲ್ಲಿ ವಿಧಾನ ಪರಿಷತ್ ಮಾಜಿ ವಿಪಕ್ಷ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ದೂಡಾ ಅಧ್ಯಕ್ಷರುಗಳಾದ ಕೆ.ಎಂ. ಸುರೇಶ್, ಯಶವಂತರಾವ್ ಜಾಧವ್, ಪಾಲಿಕೆ ಸದಸ್ಯರುಗಳಾದ ಕೆ.ಎಂ. ವೀರೇಶ್, ಎಸ್.ಟಿ. ವೀರೇಶ್, ಮುಖಂಡರುಗಳಾದ ಲೋಕಿಕೆರೆ ನಾಗರಾಜ್, ಶ್ರೀನಿವಾಸ ದಾಸಕರಿಯಪ್ಪ, ಕುಮಾರ್, ಶಿವನಗೌಡ ಟಿ.ಪಾಟೀಲ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.**

# ರಾಜ್ಯ ಮಟ್ಟದ ಚದುರಂಗ ಸ್ಪರ್ಧೆಗೆ ದೀಕ್ಷಿತ್ ಆಯ್ಕೆ



ದಾವಣಗೆರೆ, ಅ.15- ನಗರದ ಶ್ರೀ ಸೋಮೇಶ್ವರ ವಿದ್ಯಾಲಯದ 9ನೇ ತರಗತಿ ವಿದ್ಯಾರ್ಥಿ ದೀಕ್ಷಿತ್ ಕ್ರೀಡಾಕೂಟದಲ್ಲಿ ಮತ್ತೊಂದು ಸಾಧನೆ ಮಾಡಿದ್ದಾರೆ. ನಗರದ ಗುರುಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜಿಲ್ಲಾ ಮಟ್ಟದ 17 ವರ್ಷದ ಬಾಲಕರ ವಿಭಾಗದ ಚದುರಂಗ ಸ್ಪರ್ಧೆಯಲ್ಲಿ ದೀಕ್ಷಿತ್ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ.

# ಜಿಲ್ಲಾ ಅಬಕಾರಿ ಡಿಸಿ ಸೇರಿ ನಾಲ್ವರು ಲೋಕಾ ಬಲೆಗೆ



ದಾವಣಗೆರೆ, ಅ.14- ಜಿಲ್ಲಾ ಅಬಕಾರಿ ಡಿಸಿ ಸೇರಿದಂತೆ ನಾಲ್ವರು ಶನಿವಾರ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ.

ಮದ್ಯದ ಅಂಗಡಿ ಆರಂಭಕ್ಕೆ ಪರವಾನಗಿ ಕೊಡಲು ಲಂಚ ಪಡೆಯುತ್ತಿರುವಾಗ ಲೋಕಾಯುಕ್ತ ಅಧಿಕಾರಿಗಳಿಂದ ದಾಳಿ ನಡೆದಿದ್ದು, ಜಿಲ್ಲಾ ಅಬಕಾರಿ ಡಿ.ಸಿ ಸ್ವಪ್ನ, ಪ್ರಥಮ ದರ್ಜೆ ಸಹಾಯಕ ಅಶೋಕ ಎಚ್.ಎಂ., ಹರಿಹರ ಅಬಕಾರಿ ವಲಯ ಕಚೇರಿಯ ಅಬಕಾರಿ ನಿರೀಕ್ಷಕಿ ಶೀಲಾ, ದ್ವಿತೀಯ ದರ್ಜೆ ಸಹಾಯಕಿ ಶೈಲಶ್ರೀ ಅವರುಗಳನ್ನು ಬಂಧಿಸಲಾಗಿದೆ.

ಹರಿಹರದ ಅಮರಾವತಿ ಬಳಿ ಮದ್ಯದ ಅಂಗಡಿ ಆರಂಭಿಸಲು ಡಿ.ಜಿ. ರಘುನಾಥ ಎಂಬುವರು ಅರ್ಜಿ ಸಲ್ಲಿಸಿದ್ದರು. ಅವರಿಂದ ಆರೋಪಿಗಳು 3 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ನಗರದ ದೇವರಾಜ ಅರಸು ಬಡಾವಣೆಯಲ್ಲಿ ಇರುವ ಅಬಕಾರಿ ಇಲಾಖೆ ಕಚೇರಿಯಲ್ಲಿ ಆರೋಪಿ ಅಶೋಕ ಎಚ್.ಎಂ. ಲಂಚ ಪಡೆಯುತ್ತಿರುವಾಗ ಲೋಕಾಯುಕ್ತ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ದಾವಣಗೆರೆ ಲೋಕಾಯುಕ್ತ ಎಸ್‌ಪಿ ಎಂ.ಎಸ್. ಕೌಲಾಪೂರೆ ಅವರ ಮಾರ್ಗದರ್ಶನದಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಾದ ಪ್ರಭು ಬ. ಸೂರಿನ, ಮಧುಸೂದನ್, ಎಚ್.ಎಸ್. ರಾಷ್ಟ್ರಪತಿ, ಹಾವೇರಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ ಪಂಡಿತ್ ಅವರ ನೇತೃತ್ವದಲ್ಲಿ ಕಾನ್‌ಸ್ಟೇಬಲ್‌ಗಳಾದ ವೀರೇಶಯ್ಯ, ಆಂಜನೇಯ, ಜಂಷಿದಾ ಖಾನಂ, ಧನರಾಜ್, ಮಲ್ಲಿಕಾರ್ಜುನ, ಲಿಂಗೇಶ, ಬಸವರಾಜ, ಗಿರೀಶ್, ವಿನಾಯಕ, ಕೃಷ್ಣನಾಯ್ಕ, ಮೋಹನ್, ಕೋಟಿನಾಯ್ಕ, ಮಾಲತೇಶ ಅರಸೀಕೆರೆ, ಎಸ್.ಎಸ್.ಕಡಕೋಳ, ಮಹಾಂತೇಶ ಕಂಬಳಿ, ಲಕ್ಷ್ಮವ್ವ ಆನವೇರಿ, ಹರ್ಷಿಯಾ, ಸರೋಜಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಹಳೆಕಡ್ಲೇಬಾಳ್‌ನಲ್ಲಿ ಇಂದಿನಿಂದ ಚಂಡಿಕಾ ಹೋಮ



ದಾವಣಗೆರೆ ಸಮೀಪದ ಹಳೆಕಡ್ಲೇಬಾಳು ಶ್ರೀ ನಾಗಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 24ರವರೆಗೆ ಪ್ರತಿನಿತ್ಯ ಚಂಡಿಕಾ ಹೋಮ ನಡೆಯಲಿದೆ. ನವರಾತ್ರಿ ಪ್ರಯುಕ್ತ ನಡೆಯುವ ಕಾರ್ಯಕ್ರಮದಲ್ಲಿ ಪ್ರತಿನಿತ್ಯ ಶ್ರೀ ನಾಗ ಸುಬ್ರಹ್ಮಣ್ಯ ಸ್ವಾಮಿಗೆ ಪ್ರತಿನಿತ್ಯ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಅಷ್ಟೋತ್ತರ ಪೂಜೆ, ಆಶ್ಲೇಷ ಬಲಿ ಪೂಜೆ, ಶ್ರೀ ಗಣಪತಿ ಹೋಮ, ಸುಬ್ರಹ್ಮಣ್ಯ ಮೂಲ ಮಂತ್ರ, ಹೋಮ ಹಾಗೂ ಸ್ವಾಮಿಯ ಸೇವಾ ಮತ್ತು ಪ್ರಸಾದ ವಿತರಣೆ ನಡೆಯಲಿದೆ.

## ನ್ಯೂಜಿಲ್ಯಾಂಡ್ ಮುಂದಿನ ಪ್ರಧಾನಿಯಾಗಿ ಲಕ್ಸಾನ್

ಆಕ್‌ಲ್ಯಾಂಡ್, ಅ. 14 – ಕನ್ಸರ್ವೇಟಿವ್ ಮಾಜಿ ಉದ್ಯಮಿ ಕ್ರಿಸ್ಟೋಫರ್ ಲಕ್ಸಾನ್ ಅವರು ನ್ಯೂಜಿಲ್ಯಾಂಡ್‌ನ ಮುಂದಿನ ಪ್ರಧಾನ ಮಂತ್ರಿಯಾಗಲಿದ್ದಾರೆ. ಶನಿವಾರ ನಡೆದ ನಿರ್ಣಾಯಕ ಚುನಾವಣೆಯಲ್ಲಿ ಅವರು ಗೆಲುವು ಸಾಧಿಸಿದ್ದಾರೆ. ಆರು ವರ್ಷಗಳ ಲಿಬರಲ್ ಆಡಳಿತದ ನಂತರ ಜನರು ಬದಲಾವಣೆ ಪರ ಮತ ಚಲಾಯಿಸಿದ್ದಾರೆ. ಆರು ವರ್ಷಗಳ ಬಹುಪಾಲು ಅವಧಿಯಲ್ಲಿ ಜಸಿಂಡಾ ಆರ್ಡೆರ್ನ್ ಅವರು ಆಡಳಿತ ನಡೆಸಿದ್ದರು.


## ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಕೆ.ಸಿ. ಜಯಮ್ಮನವರು

ಕೋಡಿರಂಗವ್ವನಹಳ್ಳಿ. (ನಿಧನ 17.10.2022)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು...

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಜಿ.ಸಿ. ಶಿವಮೂರ್ತಿ ಮತ್ತು ಮಕ್ಕಳು ಕೋಡಿರಂಗವ್ವನಹಳ್ಳಿ

ಶ್ರೀ ಗೀತಾಂಜನೇಯ ಬಸ್ ಮಾಲೀಕರು





## ನಗರದ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ದಸರಾ ಮಹೋತ್ಸವ



ಕೆಟಿಜೆ ನಗರ, ಮೂರನೇ ಮುಖ್ಯರಸ್ತೆ, 11 ಮತ್ತು 12ನೇ ತಿರುವಿನಲ್ಲಿರುವ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ನಾಡಹಬ್ಬ ದಸರಾ ಮಹೋತ್ಸವವು ಇಂದಿನಿಂದ 9 ದಿನಗಳ ಕಾಲ ನಡೆಯಲಿದೆ.

ಇಂದು ಬೆಳಿಗ್ಗೆ 9 ಗಂಟೆಗೆ ಅಮ್ಮನ ವರ ಗಂಗಾಪೂಜೆ ಹರಿಹರದಲ್ಲಿ ಏರ್ಪಾಡಾಗಿದ್ದು, ಅದೇ ದಿನ ಸಂಜೆ 7 ಗಂಟೆಗೆ ಶ್ರೀದೇವಿ ಘಟಸ್ಥಾಪನೆ ಮತ್ತು ದೀಪ ಹಾಕುವ ಕಾರ್ಯಕ್ರಮ ಜರುಗಲಿದೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್.ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸುವರು. ಸಂಪರ್ಕಿಸಿ : 63631 51534.

## ನಗರದಲ್ಲಿ ಇಂದಿನಿಂದ ವಿಹೆಚ್‌ಪಿ ನೇತೃತ್ವದಲ್ಲಿ ನಾಡ ಹಬ್ಬ ಉತ್ಸವ

ವಿಶ್ವ ಹಿಂದೂ ಪರಿಷತ್ ವತಿಯಿಂದ ದಸರಾ ಅಂಗವಾಗಿ ಬೀರಲಿಂಗೇಶ್ವರ ಮೈದಾನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಜಡೆಸಿದ್ದ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಶ್ರೀ ದುರ್ಗಾದೇವಿಯ ವಿಗ್ರಹವನ್ನು ಮೆರವಣಿಗೆ ಮೂಲಕ ಶ್ರೀ ದುರ್ಗಾದೇವಿಯ ಘಟಸ್ಥಾಪಿಸಲಾಗು0ವುದು. ಇಂದಿನಿಂದ 9 ದಿನಗಳ ಕಾಲ ಪ್ರತಿದಿನ ಶಾಸ್ತ್ರೋಕ್ತ ಪೂಜೆ ಕಾರ್ಯಕ್ರಮ ಮತ್ತು ಪ್ರತಿದಿನ ಸಂಜೆ 4.30 ರಿಂದ ಮಹಿಳೆಯರಿಂದ ಲಲಿತಾಸಹಸ್ರನಾಮ ಪಠಣ ನಡೆಯುವುದು.

## ನಿಟುವಳ್ಳಿಯಲ್ಲಿ ಇಂದಿನಿಂದ ದಸರಾ ಉತ್ಸವ



ಗ್ರಾಮದ ದೇವತೆಗಳಾದ ಶ್ರೀ ದುರ್ಗಾಂಬಿಕಾದೇವಿ ಮತ್ತು ಶ್ರೀ ಕರಿಯಾಂಬಿಕಾ ದೇವಿ ದೇವಸ್ಥಾನಗಳಲ್ಲಿ ದಸರಾ ಮಹೋತ್ಸವದ ಅಂಗವಾಗಿ ಇಂದಿನಿಂದ ಇದೇ ದಿನಾಂಕ 24ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಇಂದು ಸಂಜೆ ಘಟಸ್ಥಾಪನೆ, ದೀಪಾರಾಧನೆ ನಂತರ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ಇಂದಿನಿಂದ ದಿನಾಂಕ 24ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ಶ್ರೀ ದೇವಿ ಪುರಾಣ ಪ್ರವಚನ ಇರುತ್ತದೆ.

## ರಾಣೇಬೆನ್ನೂರಿನ ಕುರುಬಗೇರಿ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ನವರಾತ್ರಿ



ನವರಾತ್ರಿ ಹಬ್ಬದ ಅಂಗವಾಗಿ ಕುರುಬಗೇರಿ ಕುದುರಿ ಗಲ್ಲಿಯ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 24ರವರೆಗೆ 10 ದಿವಸ ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಪ್ರತಿನಿತ್ಯ ಸಂಜೆ 5 ಗಂಟೆಗೆ ದೇವಾಂಗ ಮಹಿಳಾ ಸಂಘದ ವತಿಯಿಂದ ಲಲಿತಾ ಸಹಸ್ರನಾಮ ಸ್ತೋತ್ರ ಪಠಣ ಹಾಗೂ ದೇವಿಯ ಭಕ್ತಿ ಗೀತೆ ಕಾರ್ಯಕ್ರಮ ಇರುತ್ತದೆ. ನಂತರ ರಾತ್ರಿ 7ಗಂಟೆಗೆ ಪ್ರವಚನಕಾರ ಮರಡೆಪ್ಪ ಶಿರಗೂರ ಇವರಿಂದ ದೇವಿ ಪುರಾಣ ಪ್ರವಚನ ಕಾರ್ಯಕ್ರಮ ಇರುತ್ತದೆ.

## ಕೊಕ್ಕನೂರಲ್ಲಿ ಇಂದಿನಿಂದ ಶರನ್ನವರಾತ್ರಿ



ಕೊಕ್ಕನೂರು ಗ್ರಾಮದ ಶ್ರೀ ಆಂಜನೇಯಸ್ವಾಮಿ ಮತ್ತು ಶ್ರೀ ದುರ್ಗಾದೇವಿ ದೇವಸ್ಥಾನಗಳಲ್ಲಿ ಇಂದಿನಿಂದ ಶರನ್ನವರಾತ್ರಿ ಕಾರ್ಯಕ್ರಮಗಳು ನಡೆಯಲಿವೆ. ಇಂದು ರಾತ್ರಿ 9 ಗಂಟೆಗೆ ಗಂಗಾ ಪೂಜೆಯೊಂದಿಗೆ ಘಟಸ್ಥಾಪನೆ ಆಗಲಿದ್ದು, ಇಂದಿನಿಂದ ದಿನಾಂಕ 24 ರವರೆಗೆ ಪ್ರತಿ ದಿನ ಸಂಜೆ ಬೇರೆ ಬೇರೆ ಗ್ರಾಮಗಳ ಭಜನಾ ಸಂಘದವರಿಂದ ಭಜನೇ ಏರ್ಪಡಿಸಲಾಗಿದೆ.

## ಶ್ಯಾಗಲೆಯಲ್ಲಿ ಇಂದು ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿಗಳ ಪುಣ್ಯಾರಾಧನೆ

ದಾವಣಗೆರೆ ತಾಲ್ಲೂಕಿನ ಶ್ಯಾಗಲೆ ಗ್ರಾಮದ ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿಗಳ 68ನೇ ಪುಣ್ಯಾರಾಧನೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11.30ಕ್ಕೆ ಶ್ಯಾಗಲೆಯ ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ಹಾಗೂ ದುಗ್ಗಾವತಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಿತಿ ಅಧ್ಯಕ್ಷ ವಿ. ತಿಪ್ಪೇಸ್ವಾಮಿ ವಹಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ಎಸ್.ಎಸ್. ಮಲ್ಲಿಕಾರ್ಜುನ್, ಕೆ.ಎಸ್. ಬಸವಂತಪ್ಪ, ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಬಸವರಾಜನಾಯ್ಕ್, ಬಿ.ಎಂ. ವಾಗೀಶಸ್ವಾಮಿ, ಶ್ಯಾಮ್, ಶೋಭಮ್ಮರಾಜಪ್ಪ ಪಾಲ್ಗೊಳ್ಳಲಿದ್ದಾರೆ.

## ನವರಾತ್ರಿ ಮೊದಲ ದಿನ ಶೈಲಪುತ್ರಿಗೆ ನಮನ



ನಮೋ ನಮೋ
ಶೈಲಪುತ್ರಿ
ಪರ್ವತಕುವರಿ
ನಮೋ ನಮೋ
ದೇವಿ
ಪರಮೇಶ್ವರಿ
ನಮೋ
ವೃಷಭರೂಢಿ ಶ್ವೇತಾಂಬರಧರಿ
ನಮೋ ಸುಜ್ಞಾನಕೊಡುವ ಕೃಪಾಕರಿ

ಶಿವನ ಸತಿ ದಾಕ್ಷಿಯಿಣಿ ಅವತಾರಳೆ
ಶಿವನ ಪತ್ನಿಯಾಗಲು ತಪಸ್ಸುಮಾಡಿದವಳೆ
ಶಿವನ ಒಲಿಸಿಕೊಂಡ ಅತ್ಯಂತ ಶ್ರೇಷ್ಠಳೆ
ಶಿವನ ಜೊತೆಯಲಿದ್ದು ವರವ ಕೊಡುವಳೆ

ಮೂಲಾಧಾರ ಚಕ್ರದಲ್ಲಿ ಇರುವವಳೆ
ಮೂಲ ಶಕ್ತಿ ಕೊಟ್ಟು ಸಾಧನೆ ಮಾಡಿಸುವಳೆ
ಅಲ್ಲಿ ಆಧ್ಯಾತ್ಮಿಕ ಶಕ್ತಿ ಅಂಕುರ ಮಾಡುವಳೆ
ಸಲ್ಲದ ಚಂಚಲತೆ ಬಿಡಿಸಿ ಸ್ಥಿರತೆ ಕೊಡುವವಳೆ

ತ್ರಿಶೂಲ ಕಮಲ ಹಿಡಿದಿರುವ ಎರಡು ಕೈಗಳು
ವಿಶೇಷವಾಗಿರುವ ಹಣೆಯಲಿ ಅರ್ಧ ಚಂದ್ರನು.
ವಿಶ್ವಾಸ ಭಕ್ತಿಗೊಲಿವಳು ಅತ್ಯಂತ ಶಕ್ತಳು
ವಿಶೇಷ ಸಿರಿಹರಿಗೆ ತಂಗ್ಯಮ್ಮಳಾದವಳು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ನಗರದ ಶಂಕರ ಮಠದಲ್ಲಿ ಇಂದಿನಿಂದ ನಾಡ ಹಬ್ಬ ಉತ್ಸವ

ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದಿನಿಂದ ಇದೇ ದಿನಾಂಕ 24ರ ಮಂಗಳವಾರದವರೆಗೆ ಶ್ರೀ ಶಾರದಾ ಶರನ್ನವರಾತ್ರ್ಯುತ್ಸವ ಕಾರ್ಯಕ್ರಮಗಳು ನಡೆಯಲಿವೆ. ಇಂದಿನಿಂದ 24ರವರೆಗೆ ಪ್ರತಿದಿನ ಬೆಳಿಗ್ಗೆ 10ಕ್ಕೆ ಚಂಡಿಕಾ ಹೋಮ, ಸುಮಂಗಲಿ, ಕನ್ನಿಕಾ ಪೂಜೆ, ಮಧ್ಯಾಹ್ನ 12.40ಕ್ಕೆ ಮಹಾಪೂರ್ಣಾಹುತಿ, ಪ್ರಸಾದ ವಿನಿಯೋಗ ನಡೆಯಲಿದೆ. ಪ್ರತಿದಿನ ಸಂಜೆ 6 ರಿಂದ 8ವರರೆಗೆ ದುರ್ಗಾದೀಪ ನಮಸ್ಕಾರ, ಅಷ್ಟಾವಧಾನ ಸೇವೆ, ಸಪ್ತಶತಿ ಪಾರಾಯಣ, ದೀಪಾರಾಧನೆ ಹಾಗೂ ಸಂಜೆ 8.30ಕ್ಕೆ ಪ್ರಸಾದ ವಿನಿಯೋಗ ನೆರವೇರಲಿದೆ.

## ಹರಿಹರದ ಗ್ರಾಮದೇವತೆ ದೇವಸ್ಥಾನದಲ್ಲಿ ಶರನ್ನವರಾತ್ರಿ



ಶರನ್ನವರಾತ್ರಿ ಮಹೋತ್ಸವದ ಪ್ರಯುಕ್ತ ಮಹಜೇನಹಳ್ಳಿ ಶ್ರೀ ಗ್ರಾಮ ದೇವತೆಗೆ ಇಂದಿನಿಂದ ಇದೇ ದಿನಾಂಕ 24 ರವರೆಗೆ ಪೂಜೆ, ವಿಶೇಷ ಅಲಂಕಾರ ಮಾಡಲಾಗುತ್ತದೆ ಎಂದು ಮಾಜೇನಹಳ್ಳಿ ಗ್ರಾಮದೇವತೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಎಂ.ಶಿವಾನಂದಪ್ಪ ಮತ್ತು ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ದಸರಾ ಚೆಸ್ ತರಬೇತಿ ಶಿಬಿರ

ಇಂದಿನಿಂದ ಇದೇ ದಿನಾಂಕ 30 ರವರೆಗೆ ದಸರಾ ಚೆಸ್ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷ ಕೆ. ದಿನೇಶ್ ಶೆಟ್ಟಿ ತಿಳಿಸಿದರು

ನಿಜಲಿಂಗಪ್ಪ ಬಡಾವಣೆ ಮತ್ತು ತರಳಬಾಳು ಬಡಾವಣೆಯಲ್ಲಿ ಮಕ್ಕಳಿಗೆ 15 ದಿನಗಳ ಕಾಲ ಚದುರಂಗ ತರಬೇತಿಯನ್ನು ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 99456 13469.

## ನಗರದ ತೊಗಟವೀರ ಸಮಾಜದಿಂದ ನವರಾತ್ರಿ

ದಾವಲ್‌ಪೇಟೆಯಲ್ಲಿರುವ ಶ್ರೀ ತೊಗಟವೀರ ಸಮಾಜದ ಆಶ್ರಯದಲ್ಲಿ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ದಸರಾ ಮಹೋತ್ಸವದ ವಿಶೇಷ ಅಲಂಕಾರಗಳು ಇಂದಿನಿಂದ 24 ರವರೆಗೆ ದೇವಿಗೆ ವಿವಿಧ ಅಲಂಕಾರದೊಂದಿಗೆ ನಡೆಯಲಿದೆ.

# ಹಿಂದುಳಿದ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಕ್ರಮ

## ಬಾಲಕಿಯರ ಹಾಸ್ಟೆಲ್ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಚಿವ ಎಸ್ಸೆಸ್ಸೆಂ

ದಾವಣಗೆರೆ, ಅ.14- ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಹೆಚ್ಚು ಬೇಡಿಕೆಯಿದ್ದು, ನಗರದ ನಾನಾ ಕಡೆ ಸೂಕ್ತ ಜಾಗ ಗುರುತಿಸಿ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ತಿಳಿಸಿದರು.



ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಗರದ ಕುಂದುವಾಡ ರಸ್ತೆಯ ಸಪ್ತಗಿರಿ ಶಾಲೆಯ ಪಕ್ಕದಲ್ಲಿ ಜರುಗಿದ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಗರದಲ್ಲಿ ದೇವರಾಜು ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡವು ರೂ.3.26 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದ್ದು, ಗುಣಮಟ್ಟದ ಕಾಮಗಾರಿ ಹಾಗೂ ವ್ಯವಸ್ಥಿತ ಕೊಠಡಿಗಳನ್ನು ಹೊಂದಿರಬೇಕು ಹಾಗೂ ನಿಗದಿತ ಅವಧಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡು, ವಿದ್ಯಾರ್ಥಿನಿಯರ ಅನುಕೂಲಕ್ಕೆ ಲಭ್ಯವಾಗಬೇಕು ಎಂದರು.

ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಅಧಿಕಾರಿಗಳು ಪ್ರತಿಯೊಬ್ಬರಿಗೂ ಹಾಸ್ಟೆಲ್ ವ್ಯವಸ್ಥೆ ಮಾಡಿಕೊಡಬೇಕು ಹಾಗೂ ನೂತನ ಕಟ್ಟಡವನ್ನು ಅತ್ಯಂತ ವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕು. ವಿದ್ಯಾರ್ಥಿನಿಯರು ಹಾಸ್ಟೆಲ್ ಸೌಲಭ್ಯದ ಜೊತೆಗೆ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ಹುದ್ದೆಗೇರಬೇಕೆಂದರು.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಸರ್ಕಾರಿ ಒಡೆತನದ ಜಾಗ ಕಡಿಮೆ ಇದ್ದು, ಖಾಸಗಿಯಾಗಿ ಖರೀದಿಸಿ, ವಿದ್ಯಾರ್ಥಿ ನಿಲಯವನ್ನು ನಿರ್ಮಾಣ ಮಾಡಲಾಗುವುದು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗಾಯತ್ರಿ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಪುಷ್ಪಾ ಎಸ್. ಗಡ್ಡಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸುದೀಪ್ ಪಿ. ಬನಾರೆ, ಸಹಾಯಕ ಇಂಜಿನಿಯರ್ ಪ್ರಿಯಾ ಕೆ.ಎ, ಮುಖಂಡರುಗಳಾದ ಮಾರುತಿ ಕುಂದವಾಡ, ಮೇಕಾ ಮುರುಳಿಕೃಷ್ಣ, ರಾಮಮೂರ್ತಿ, ಕುಂದವಾಡ ಮಂಜುನಾಥ್, ಎಸ್.ಎನ್. ಬಸವರಾಜ್, ಕಂಚಿಕೇರಿ ಮಹೇಶ್, ಅಂಜಿಬಾಬು, ಜೆ.ಸಿ.ಬಿ.ಹನುಮಂತಪ್ಪ, ರವಿಸ್ವಾಮಿ, ದಯಾನಂದ ಹಾಗೂ ಬಿಸಿಎಂ ಇಲಾಖೆಯ ವಾರ್ಡನ್‌ಗಳು, ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

## ನಗರದೇವತೆ ದುಗ್ಗಮ್ಮನ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಉತ್ಸವ




ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 24ರವರೆಗೆ 9 ದಿನಗಳ ಕಾಲ ನವರಾತ್ರಿ ಮಹೋತ್ಸವ ಆಯೋಜನೆಗೊಂಡಿದೆ.

ಇಂದು ಬೆಳಿಗ್ಗೆ 6.30ಕ್ಕೆ ದೇವಸ್ಥಾನದ ಪುರೋಹಿತರಾದ ನಾಗರಾಜ್ ಜೋಯಿಸ್ ಅವರ ಸಮ್ಮುಖದಲ್ಲಿ ಹಿರಿಯ ಶಾಸಕರೂ ಆಗಿರುವ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷ ಶಾಮನೂರು ಶಿವಶಂಕರಪ್ಪ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ದೀಪ ಬೆಳಗಿಸುವುದರ ಮೂಲಕ ದಸರಾ ಉತ್ಸವಕ್ಕೆ ಚಾಲನೆ ನೀಡುವರು.

ನವರಾತ್ರಿ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 15 ರಿಂದ 9 ದಿನಗಳ ಕಾಲ ಪ್ರತಿದಿನ ರಾತ್ರಿ 7.30 ರಿಂದ ದೇವಸ್ಥಾನದ ಪಾದಗಟ್ಟೆ ಹತ್ತಿರ ಶ್ರೀ ದೇವಿ ಪುರಾಣ - ಪ್ರವಚನ ಜರುಗಲಿದೆ. ಹಾವೇರಿ ಜಿಲ್ಲೆ ಹಾವನೂರು ತಾಲ್ಲೂಕಿನ ಕರಡಗಿ ಗ್ರಾಮದ ಹರಿಕಥಾ ವಿದ್ವಾನ್ ರೇವಣಸಿದ್ದಯ್ಯ ಶಾಸ್ತ್ರಿ ಮತ್ತು ಸಂಗಡಿಗರು ಪ್ರವಚನ ನಡೆಸಿಕೊಡುವರು.

ಇದೇ ದಿನಾಂಕ 23ರ ಸೋಮವಾರ ನಡೆಯಲಿರುವ ಕುಂಭಾಭಿಷೇಕದಲ್ಲಿ ಭಾಗವಹಿಸಲಿಚ್ಛಿ ಸುವ ವರು ದೇವಸ್ಥಾನದಲ್ಲಿ ಹೆಸರು ನೋಂದಾಯಿಸ ಬಹುದು ಎಂದು ದೇವಸ್ಥಾನ ಟ್ರಸ್ಟ್ ಧರ್ಮ ದರ್ಶಿ ಗೌಡ್ರು ಚನ್ನಬಸಪ್ಪ ತಿಳಿಸಿದ್ದಾರೆ.

## ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ಶರನ್ನವರಾತ್ರಿ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ರಸ್ತೆ, ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 24ರವರೆಗೆ 9 ದಿನಗಳ ಕಾಲ ಶರನ್ನವರಾತ್ರಿ ಮಹೋತ್ಸವ ಆಯೋಜನೆಗೊಂಡಿದೆ ಎಂದು ದೇವಸ್ಥಾನ ಸಂಘದ ಅಧ್ಯಕ್ಷ ಆರ್. ಎಲ್. ಪ್ರಭಾಕರ್ ತಿಳಿಸಿದ್ದಾರೆ. ಪ್ರತಿದಿನ ಬೆಳಿಗ್ಗೆ 7 ರಿಂದ ಪಂಚಾಮೃತ ಅಭಿಷೇಕ, ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರಿಗೆ ವಿಶೇಷ ಅಲಂಕಾರಗಳು ಹಾಗೂ ಅಮ್ಮನವರ ಉತ್ಸವ ಮೂರ್ತಿಗೆ ವಿಶೇಷ ಅಲಂಕಾರದೊಂದಿಗೆ ಪ್ರತಿದಿನ ಸಂಜೆ 7.30ರಿಂದ ಪ್ರಾಕಾರೋತ್ಸವ, ಕುಂಕುಮಾರ್ಚನೆ, ಮಂತ್ರಪುಷ್ಪ, ಅಷ್ಟಾವಧಾನ, ಮಹಾಮಂಗಳಾರತಿ ನಂತರ ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ. ಪ್ರತಿದಿನ ಸಂಜೆ 5 ರಿಂದ 6ರವರೆಗೆ ವಾಸವಿ ಭಜನಾ ಮಂಡಳಿ ಇವರಿಂದ ಲಲಿತ ಸಹಸ್ರನಾಮಾರ್ಚನೆ ನಡೆಯಲಿದ್ದು, ಶ್ರೀಮತಿ ಹೇಮಾ ಶ್ರೀನಿವಾಸ್ ಮತ್ತು ಸಂಗಡಿಗರಿಂದ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರಿಗೆ ಶ್ರೀ ಕೊಲ್ಲೂರು ಮೂಕಾಂಬಿಕೆ ಅಲಂಕಾರ ನಡೆಯಲಿದ್ದು, ಸಂಜೆ 6.30 ರಿಂದ ಶ್ರೀಮತಿ ಶೀಲಾ ನಟರಾಜ್ ತಂಡವದರಿಂದ ಕಂಚಿ ಕಾಮಾಕ್ಷಿ ಕಾರ್ಯಕ್ರಮ ನಡೆಯಲಿದೆ.

## ಮೆಡ್ಲೇರಿಯಲ್ಲಿ ದಸರಾ ದೀಪೋತ್ಸವ

ರಾಣೇಬೆನ್ನೂರು ತಾಲ್ಲೂಕಿನ ಮೆಡ್ಲೇರಿ ಗ್ರಾಮದ ಶ್ರೀ ಬೀರೇಶ್ವರ ಸ್ವಾಮಿಯ ದಸರಾ ಹಬ್ಬದ ದೀಪೋತ್ಸವ ಕಾರ್ಯಕ್ರಮವು ಇಂದಿನಿಂದ ಇದೇ ದಿನಾಂಕ 23ರ ವರೆಗೆ ನಡೆಯಲಿದೆ.

ದಿನಾಂಕ 20ರಂದು ಕುರುಬ ಸಮಾಜದ ಹಿತಚಿಂತನೆಗೆ ಹೆಚ್ಚು ಸಮಯಾವಕಾಶ ನೀಡುವ ಶಾಸಕ ಪ್ರಕಾಶ ಕೋಳಿವಾಡ ಅವರನ್ನು ಗೌರವಿಸಲಾಗುವುದು ಎಂದು ಡಿಳ್ಳೆಪ್ಪ ಅಣ್ಣೇರ ತಿಳಿಸಿದ್ದಾರೆ. ಬೀರೇಶ್ವರ ದೇವಸ್ಥಾನದಲ್ಲಿ ನಡೆಯುವ ಸದರಿ ಕಾರ್ಯಕ್ರಮದಲ್ಲಿ ಗ್ರಾಮದ ಮುಸ್ಲಿಮ್, ಗಂಗಾಮತ, ವೀರಶೈವ ಲಿಂಗಾಯತ, ಭಜಂತ್ರಿ, ಹರಿಜನ ಸಮಾಜಗಳ ಹಾಗೂ ಡಾಲಿ ಬಾಯ್ಸ್ ಸೇರಿದಂತೆ ವಿವಿಧ ಇತರೆ ಪದಾಧಿಕಾರಿಗಳು ಪಾಲ್ಗೊಳ್ಳುವರೆಂದು ಅಣ್ಣೇರ ತಿಳಿಸಿದರು.

## ನಗರದಲ್ಲಿ ಇಂದಿನಿಂದ ಶ್ರೀ ಸಾಯಿಬಾಬಾರವರ ಪುಣ್ಯಾರಾಧನೆ



ಎಂಸಿಸಿ ಎ ಬ್ಲಾಕ್, 8ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ಶ್ರೀ ಸದ್ಗುರು ಸಾಯಿಬಾಬಾರವರ 105ನೇ ಪುಣ್ಯಾರಾಧನೆ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 25ರವರೆಗೆ 10 ದಿನಗಳ ಕಾಲ ನಡೆಯಲಿದೆ.

ಶ್ರೀ ಸಾಯಿಬಾಬಾ ಮೂರ್ತಿಗೆ ಪ್ರತಿದಿನ ಬೆಳಿಗ್ಗೆ 5.30 ಗಂಟೆಗೆ ಕಾಕಡಾರತಿ, ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ ಕಾರ್ಯಕ್ರಮಗಳು ಜರುಗಲಿವೆ.

ಇಂದು ಬೆಳಿಗ್ಗೆ 8 ಗಂಟೆಗೆ ಮಹಾಮಂಗಳಾರತಿ, 9 ಗಂಟೆಗೆ ಸಾಮೂಹಿಕ ಶ್ರೀ ಸಾಯಿ ಸತ್ಯನಾರಾಯಣ ಪೂಜೆ ನಡೆಯಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ವಿವರಿಸಿದ್ದಾರೆ.

## ನಗರದ ಶಾರದಾಂಬ ದೇವಸ್ಥಾನದಲ್ಲಿ ಇಂದಿನಿಂದ ಶರನ್ನವರಾತ್ರಿ ಮಹೋತ್ಸವ

ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀಗಣಪತಿ, ಶ್ರೀ ಶಾರದಾಂಬಾ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 24ರವರೆಗೆ ಶರನ್ನವರಾತ್ರಿ ಮಹೋತ್ಸವ ನಡೆಯಲಿದೆ.

KJS ಬೇಕಾಗಿದ್ದಾರೆ

ಕುಮಾರ ಜ್ಯೂಯಲರ್ಸ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಸಕ್ತರು ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.

ಕುಮಾರ ಜ್ಯೂಯಲರ್ಸ್
ಮಂಡಿಪೇಟೆ, ದಾವಣಗೆರೆ.
75369 16916 99640 88991

ಹಾರ್ದಿಕ ಅಭಿನಂದನೆಗಳು



ಶ್ರೀಯುತ ಎಸ್.ಎಫ್. ಬಿಲ್ಲಳ್ಳಿ

ಶ್ರೀಯುತರಿಗೆ ನರ್ಸಿಂಗ್ ವಿಭಾಗದಲ್ಲಿ ಡಾ. ಅಬ್ದುಲ್ ಲತೀಫ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ್ದ ಮಹಾ ಪ್ರಬಂಧವನ್ನು ಪುರಸ್ಕರಿಸಿರುವ ತೆರ್ಬವಾಲ್ ವಿಶ್ವವಿದ್ಯಾಲಯ ರಾಜಸ್ಥಾನ, ಪಿಹೆಚ್‌ಡಿ ಪದವಿ ನೀಡಿ ಗೌರವಿಸಿದ್ದು, ಈ ಶುಭ ಸಂದರ್ಭದಲ್ಲಿ ಶ್ರೀಯುತ ಎಸ್.ಎಫ್. ಬಿಲ್ಲಳ್ಳಿ, ಪ್ರಾಂಶುಪಾಲರು, ಸ್ನೇಹ ಭಾರತಿ, ಕಾಲೇಜ್ ಆಫ್ ನರ್ಸಿಂಗ್, ತುಮಕೂರು ಅವರಿಗೆ ಹಾರ್ದಿಕ ಅಭಿನಂದನೆಗಳು.

ಶುಭ ಕೋರುವವರು :
ಪತ್ನಿ - ಶ್ರೀಮತಿ ಆಶಾ ಎಸ್. ಬಿಲ್ಲಳ್ಳಿ, ಮಕ್ಕಳು

## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ಈ ಕೆಳಗೆ ಸಹಿ ಮಾಡಿದ ಪ್ರಕಟಣೆದಾರರಾದ ನಾವು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, **ಬೆಳವನೂರು** ಗ್ರಾಮದ ವಾಸಿಗಳಾದ **ಶ್ರೀ ಜಿ.ಆರ್. ಭರ್ಮಪ್ಪ ಬಿನ್ ಲೇಟ್ ಜಿ.ರೇವಣಸಿದ್ದಪ್ಪ ಮತ್ತು ಇವರ ಸಹೋದರಿಯರುಗಳಾದ ಶ್ರೀಮತಿ ಲತಾ, ಶ್ರೀಮತಿ ರಾಜೇಶ್ವರಿ ಮತ್ತು ಶ್ರೀಮತಿ ಮಂಜುಳ ಹಾಗೂ ಸದರಿ ಭರ್ಮಪ್ಪನ ಮಕ್ಕಳಾದ ಶ್ರೀಮತಿ ಶೋಭಾ ಮತ್ತು ಶ್ರೀಮತಿ ರೇವತಿ. ಜೆ.ಡಿ** ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯು ಈಗಾಗಲೇ ವ್ಯವಹರಿಸಿದ್ದಲ್ಲಿ / ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರನನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7(ಏಳು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

**ಷೆಡ್ಯೂಲ್** : ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮದ ರಿ.ಸರ್ವೆ ನಂ. 51/35, ವಿಸ್ತೀರ್ಣ ಎಕರೆ-01, ಗುಂಟೆ-11 ವುಳ್ಳ ಜಮೀನಿಗೆ ಚಕ್ಕುಬಂದಿ : **ಪೂರ್ವಕ್ಕೆ** : ಜಿ.ಎಸ್.ಬಸವರಾಜಪ್ಪ ಇವರ ಜಮೀನು. **ಪಶ್ಚಿಮಕ್ಕೆ** : ಚನ್ನಗಿರಿ-ದಾವಣಗೆರೆ ರಸ್ತೆ, **ಉತ್ತರಕ್ಕೆ** : ಶಶಿಕಲಾ ಇವರ ಜಮೀನು. **ದಕ್ಷಿಣಕ್ಕೆ** : ಜಿ.ಬಸವರಾಜಪ್ಪ ಇವರ ಜಮೀನು.

**ಮೆ|| ನನಸು ಇನ್ಫ್ರಾಸ್ಟ್ರಕ್ಚರ್ಸ್**
ಇದರ ಪಾಲುದಾರರು : **ಶ್ರೀ ಸೂರಜ್ ಪಿ., ಶ್ರೀಮತಿ ನಂದ ಬಿ.ಆರ್.**
ಖಾಯಂ ವಾಸ : ನಂ.57, 2ನೇ ಮಹಡಿ, 2ನೇ ಕ್ರಾಸ್,
ಅನುಭವ ನಗರ, ಮೂಡಲಪಾಳ್ಯ, ಬೆಂಗಳೂರು.
ಹಾಲಿ ವಾಸ : ಮನೆ ನಂ.391/1-111, 'ಲಕ್ಷ್ಮಿ ಸದನ',
ಎಸ್.ಎಸ್. ಆಸ್ಪತ್ರೆ ಹತ್ತಿರ, ಎನ್.ಹೆಚ್-4 ಸರ್ವೀಸ್ ರಸ್ತೆ,
ಲಕ್ಷ್ಮೀ ಬಡಾವಣೆ, ದಾವಣಗೆರೆ. **ಫೋನ್ ನಂ. : 97392 80555**

## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ಈ ಕೆಳಗೆ ಸಹಿ ಮಾಡಿದ ಪ್ರಕಟಣೆದಾರರಾದ ನಾವು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, **ಬೆಳವನೂರು** ಗ್ರಾಮದ ವಾಸಿಗಳಾದ **ಶ್ರೀಮತಿ ಗಂಗಮ್ಮ ಕೋಂ. ಲೇಟ್ ಬಿ.ಜಿ. ಶೇಖರಪ್ಪ ಮತ್ತು ಮಕ್ಕಳಾದ ಶ್ರೀ ಬಸವರಾಜಪ್ಪ, ಶ್ರೀಮತಿ ಸುಜಾತ ಮತ್ತು ಶ್ರೀ ಶಿವಕುಮಾರ್, ಸದರಿ ಬಸವರಾಜಪ್ಪ ಬಿನ್ ಲೇಟ್ ಬಿ.ಜಿ. ಶೇಖರಪ್ಪ ಇವರ ಮಗನಾದ ಶ್ರೀ ನಂದೀಶ್ ಮತ್ತು ಶ್ರೀ ಶಿವಕುಮಾರ್ ಬಿನ್ ಲೇಟ್ ಬಿ.ಜಿ. ಶೇಖರಪ್ಪ ಇವರ ಮಗನಾದ ಜೀವನ್** ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯು ಈಗಾಗಲೇ ವ್ಯವಹರಿಸಿದ್ದಲ್ಲಿ / ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರನನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7(ಏಳು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

**ಷೆಡ್ಯೂಲ್** : ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮದ ರಿ.ಸರ್ವೆ ನಂ. 51/37, ವಿಸ್ತೀರ್ಣ ಎಕರೆ-01, ಗುಂಟೆ-12 ವುಳ್ಳ ಜಮೀನಿಗೆ ಚಕ್ಕುಬಂದಿ : **ಪೂರ್ವಕ್ಕೆ** : ಜಿ.ಎಸ್.ಬಸವರಾಜಪ್ಪ ಇವರ ಜಮೀನು. **ಪಶ್ಚಿಮಕ್ಕೆ** : ಚನ್ನಗಿರಿ-ದಾವಣಗೆರೆ ರಸ್ತೆ, **ಉತ್ತರಕ್ಕೆ** : ಜಿ. ಬಸವರಾಜಪ್ಪ ಇವರ ಜಮೀನು. **ದಕ್ಷಿಣಕ್ಕೆ** : ಅನಸೂಯಮ್ಮ ಮತ್ತು ಇವರ ಮಕ್ಕಳ ಜಮೀನು.

**ಮೆ|| ನನಸು ಇನ್ಫ್ರಾಸ್ಟ್ರಕ್ಚರ್ಸ್**
ಇದರ ಪಾಲುದಾರರು : **ಶ್ರೀ ಸೂರಜ್ ಪಿ., ಶ್ರೀಮತಿ ನಂದ ಬಿ.ಆರ್.**
ಖಾಯಂ ವಾಸ : ನಂ.57, 2ನೇ ಮಹಡಿ, 2ನೇ ಕ್ರಾಸ್,
ಅನುಭವ ನಗರ, ಮೂಡಲಪಾಳ್ಯ, ಬೆಂಗಳೂರು.
ಹಾಲಿ ವಾಸ : ಮನೆ ನಂ.391/1-111, 'ಲಕ್ಷ್ಮಿ ಸದನ',
ಎಸ್.ಎಸ್. ಆಸ್ಪತ್ರೆ ಹತ್ತಿರ, ಎನ್.ಹೆಚ್-4 ಸರ್ವೀಸ್ ರಸ್ತೆ,
ಲಕ್ಷ್ಮೀ ಬಡಾವಣೆ, ದಾವಣಗೆರೆ. **ಫೋನ್ ನಂ. : 97392 80555**

## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ಈ ಕೆಳಗೆ ಸಹಿ ಮಾಡಿದ ಪ್ರಕಟಣೆದಾರರಾದ ನಾವು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, **ಬೆಳವನೂರು** ಗ್ರಾಮದ ವಾಸಿಗಳಾದ **ಶ್ರೀಮತಿ ಬಿ.ಕೆ. ಶಶಿಕಲಾ ಕೋಂ. ಲೇಟ್ ಜಿ. ನಾಗರಾಜಪ್ಪ ಮತ್ತು ಮಕ್ಕಳಾದ ಶ್ರೀ ಕಿರಣ್‌ಕುಮಾರ್ ಬಿ.ಎನ್. ಶ್ರೀ ಬಿ.ಎನ್. ಹರೀಶ್‌ಕುಮಾರ್ ಮತ್ತು ಶ್ರೀ ಸಂದೀಪ್‌ಕುಮಾರ್** ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯು ಈಗಾಗಲೇ ವ್ಯವಹರಿಸಿದ್ದಲ್ಲಿ / ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರನನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7(ಏಳು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

**ಷೆಡ್ಯೂಲ್** : ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮದ ರಿ.ಸರ್ವೆ ನಂ. 51/4, ವಿಸ್ತೀರ್ಣ ಎಕರೆ-01, ಗುಂಟೆ-11 ವುಳ್ಳ ಜಮೀನಿಗೆ ಚಕ್ಕುಬಂದಿ : **ಪೂರ್ವಕ್ಕೆ** : ಜಿ.ಎಸ್.ಬಸವರಾಜಪ್ಪ ಇವರ ಜಮೀನು. **ಪಶ್ಚಿಮಕ್ಕೆ** : ಚನ್ನಗಿರಿ-ದಾವಣಗೆರೆ ರಸ್ತೆ, **ಉತ್ತರಕ್ಕೆ** : ಸಿದ್ದಣ್ಣ ಇವರ ಜಮೀನು. **ದಕ್ಷಿಣಕ್ಕೆ** : ಜಿ.ಆರ್. ಭರ್ಮಪ್ಪ ಇವರ ಜಮೀನು.

**ಮೆ|| ನನಸು ಇನ್ಫ್ರಾಸ್ಟ್ರಕ್ಚರ್ಸ್**
ಇದರ ಪಾಲುದಾರರು : **ಶ್ರೀ ಸೂರಜ್ ಪಿ., ಶ್ರೀಮತಿ ನಂದ ಬಿ.ಆರ್.**
ಖಾಯಂ ವಾಸ : ನಂ.57, 2ನೇ ಮಹಡಿ, 2ನೇ ಕ್ರಾಸ್,
ಅನುಭವ ನಗರ, ಮೂಡಲಪಾಳ್ಯ, ಬೆಂಗಳೂರು.
ಹಾಲಿ ವಾಸ : ಮನೆ ನಂ.391/1-111, 'ಲಕ್ಷ್ಮಿ ಸದನ',
ಎಸ್.ಎಸ್. ಆಸ್ಪತ್ರೆ ಹತ್ತಿರ, ಎನ್.ಹೆಚ್-4 ಸರ್ವೀಸ್ ರಸ್ತೆ,
ಲಕ್ಷ್ಮೀ ಬಡಾವಣೆ, ದಾವಣಗೆರೆ. **ಫೋನ್ ನಂ. : 97392 80555**

## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ಈ ಕೆಳಗೆ ಸಹಿ ಮಾಡಿದ ಪ್ರಕಟಣೆದಾರರಾದ ನಾವು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, **ಬೆಳವನೂರು** ಗ್ರಾಮದ ವಾಸಿಗಳಾದ **ಶ್ರೀ ಜಿ. ಬಸವರಾಜಪ್ಪ ಬಿನ್ ಲೇಟ್ ಚನ್ನಬಸಪ್ಪ ಮತ್ತು ಇವರ ಮಕ್ಕಳಾದ ಶ್ರೀ ಶಿವಶಂಕರಪ್ಪ ಜಿ.ಬಿ. ಶ್ರೀಮತಿ ಕವಿತ ಜಿ.ಬಿ. ಮತ್ತು ಶ್ರೀಮತಿ ಸುನೀತಾ ಜಿ.ಬಿ.** ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯೂ ಈಗಾಗಲೇ ವ್ಯವಹರಿಸಿದ್ದಲ್ಲಿ / ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರನನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7(ಏಳು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

**ಷೆಡ್ಯೂಲ್** : ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮದ ರಿ.ಸರ್ವೆ ನಂ. 51/36, ವಿಸ್ತೀರ್ಣ ಎಕರೆ-01, ಗುಂಟೆ-11 ವುಳ್ಳ ಜಮೀನಿಗೆ ಚಕ್ಕುಬಂದಿ : **ಪೂರ್ವಕ್ಕೆ** : ಜಿ.ಎಸ್.ಬಸವರಾಜಪ್ಪ ಇವರ ಜಮೀನು. **ಪಶ್ಚಿಮಕ್ಕೆ** : ಚನ್ನಗಿರಿ-ದಾವಣಗೆರೆ ರಸ್ತೆ, **ಉತ್ತರಕ್ಕೆ** : ಜಿ.ಆರ್. ಭರಮಪ್ಪ ಇವರ ಜಮೀನು, **ದಕ್ಷಿಣಕ್ಕೆ** : ಗಂಗಮ್ಮ ಇವರ ಜಮೀನು.

**ಮೆ|| ನನಸು ಇನ್ಫ್ರಾಸ್ಟ್ರಕ್ಚರ್ಸ್**
ಇದರ ಪಾಲುದಾರರು : **ಶ್ರೀ ಸೂರಜ್ ಪಿ., ಶ್ರೀಮತಿ ನಂದ ಬಿ.ಆರ್.**
ಖಾಯಂ ವಾಸ : ನಂ.57, 2ನೇ ಮಹಡಿ, 2ನೇ ಕ್ರಾಸ್,
ಅನುಭವ ನಗರ, ಮೂಡಲಪಾಳ್ಯ, ಬೆಂಗಳೂರು.
ಹಾಲಿ ವಾಸ : ಮನೆ ನಂ.391/1-111, 'ಲಕ್ಷ್ಮಿ ಸದನ',
ಎಸ್.ಎಸ್. ಆಸ್ಪತ್ರೆ ಹತ್ತಿರ, ಎನ್.ಹೆಚ್-4 ಸರ್ವೀಸ್ ರಸ್ತೆ,
ಲಕ್ಷ್ಮೀ ಬಡಾವಣೆ, ದಾವಣಗೆರೆ. **ಫೋನ್ ನಂ. : 97392 80555**

## ರಾಣೇಬೆನ್ನೂರು ವಿವಿಧ ಕುರುಬ ಸಂಘಗಳಿಗೆ ಸರ್ಕಾರದ ನಾಮಕರಣ



ರಾಣೇಬೆನ್ನೂರು, ಅ.14- ಬೆಂಗಳೂರಿನ ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗ ನೇಕಾರರ ಮಹಾಮಂಡಳಕ್ಕೆ ನಿರ್ದೇಶಕರಾಗಿ ಡಿಳ್ಳೆಪ್ಪ ಅಣ್ಣೇರ, ನಗರದ ಕರ್ನಾಟಕ ಕೋ-ಆಪ್ ಉಲ್ಲನ್ ಟೆಕ್ಸ್ ಟೈಲ್ ಮಿಲ್ಲಿನ ನಿರ್ದೇಶಕರಾಗಿ ಬೀರೇಶ ಕೂನಬೇವು, ಕುರಿ ಉಣ್ಣೆಯ ಔದ್ಯೋಗಿಕ ಬೆಳವಣಿಗೆ ಸಹಕಾರಿ ಸಂಘದ ನಿರ್ದೇಶಕರಾಗಿ ಭೋಜಪ್ಪ ಮಿನಕಪ್ಪರ ಅವರನ್ನು ಸರ್ಕಾರ ನಾಮಕರಣ ಮಾಡಿದೆ.

ನಗರದ ಕುರಿ ಉಣ್ಣೆ ಸಹಕಾರಿ ಸೊಸೈಟಿ ಅಧ್ಯಕ್ಷರಾಗಿ ಶಿವಪ್ಪ ಮೆಡ್ಲೇರಿ ಅವರು ಅವಿರೋಧ ಆಯ್ಕೆಯಾಗಿದ್ದು, ಸರ್ಕಾರದ ನಾಮಕರಣ ಹಾಗೂ ಸೊಸೈಟಿಯ ಅಧ್ಯಕ್ಷರ ಅವಿರೋಧ ಆಯ್ಕೆ ಮಾಡುವಲ್ಲಿ ಶಾಸಕ ಪ್ರಕಾಶ ಕೋಳಿವಾಡ ಅವರು ಬಹಳಷ್ಟು ಮುತುವರ್ಜಿ ವಹಿಸಿದ್ದಾರೆ.







